ಸಂಪುಟ 01 । ಸಂಚಿಕೆ 176 । ಬುಧವಾರ 20 ಮೇ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಜೇನುನೊಣ ದಿನ**

ಪ್ರತಿ ವರ್ಷ ಮೇ 20 ರಂದು ವಿಶ್ವ ಜೇನುನೊಣ ದಿನವನ್ನು ಆಚರಿಸಲಾಗುತ್ತದೆ. ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳು ಪರಿಸರ ವ್ಯವಸ್ಥೆಗೆ ನೀಡುವ ಕೊಡುಗೆಯನ್ನು ಗುರುತಿಸಲು ಮತ್ತು ಅವುಗಳ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯು ಈ ದಿನವನ್ನು ಜಾರಿಗೆ ತಂದಿದೆ.

**2) ಅಂತರರಾಷ್ಟ್ರೀಯ ಮಾನವ ಸಂಪನ್ಮೂಲ ದಿನ**

ಸಂಸ್ಥೆಯೊಳಗೆ ಮಾನವ ಸಂಪನ್ಮೂಲ ವೃತ್ತಿಪರರು ಮತ್ತು ಅಭ್ಯಾಸಗಳು ವಹಿಸುವ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುವ ಮತ್ತು ಇಂದಿನ ಕ್ರಿಯಾತ್ಮಕ ಕೆಲಸದ ಸ್ಥಳದಲ್ಲಿ ಮಾನವ ಸಂಪನ್ಮೂಲ ವೃತ್ತಿಪರರು ವಹಿಸುವ ಬದಲಾಗುತ್ತಿರುವ ಬೇಡಿಕೆಗಳು ಮತ್ತು ಪ್ರಮುಖ ಪಾತ್ರ ಮತ್ತು ಸಂಸ್ಥೆಗಳ ಯಶಸ್ಸಿನಲ್ಲಿ ಅವರ ನಿರ್ಣಾಯಕ ಪಾತ್ರದ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುವ ಗುರಿಯೊಂದಿಗೆ ಯುರೋಪಿಯನ್ ಅಸೋಸಿಯೇಷನ್ ಫಾರ್ ಪೀಪಲ್ ಮ್ಯಾನೇಜ್‌ಮೆಂಟ್ 2019 ರಲ್ಲಿ ಮಾನವ ಸಂಪನ್ಮೂಲ ದಿನವನ್ನು ಸ್ಥಾಪಿಸಿತು.

## ಸುಭಾಷಿತ

ನೀವು ಸಂಖ್ಯೆಯೊಂದರ ಮುಂದೆ ಇರುವ ಶೂನ್ಯದಂತೆ ಮೌನವಾಗಿದ್ದರೆ ನಿಮಗೆ ಬೆಲೆ ಬರುತ್ತದೆ. ಒಂದು ಸಂಖ್ಯೆಯ ಮುಂದೆ ಎಷ್ಟು ಶೂನ್ಯಗಳು ಇರುತ್ತವೋ ಆ ಸಂಖ್ಯೆಯ ಬೆಲೆ ಅಷ್ಟೇ ಹೆಚ್ಚಾಗುತ್ತದೆ.

ಸಿದ್ದೇಶ್ವರ ಸ್ವಾಮೀಜಿ

# ತುಮಕೂರಿನ 'ಸಾಧನಾ ಸಮಾವೇಶ' ದಲ್ಲಿ ಸೌಲಭ್ಯಗಳ ವಿತರಣೆ ದಾಖಲೆ



ತುಮಕೂರು: ರಾಜ್ಯ ಸರ್ಕಾರದ ಮೂರು ವರ್ಷಗಳ ಸಾಧನೆ-ಸಾರ್ಥಕ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಏಕಕಾಲಕ್ಕೆ ಕಂದಾಯ ಇಲಾಖೆಯಿಂದ ಅತ್ಯಧಿಕ ಹಕ್ಕು ಪತ್ರ ಹಾಗೂ ಇತರ ದಸ್ತಾವೇಜುಗಳನ್ನು ವಿತರಿಸುವ ಮೂಲಕ ದಾಖಲೆ ನಿರ್ಮಾಣ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಎಲ್ಲಾ ಸಚಿವರು ಸಮಾವೇಶದಲ್ಲಿ ಭಾಗವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 2 ಲಕ್ಷ ಜನ ಸಮಾವೇಶದಲ್ಲಿ ಭಾಗವಹಿಸಿದ್ದು, ಇದಕ್ಕಾಗಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ವಿವಿಧ ಸಾರಿಗೆ ನಿಗಮಗಳಿಂದ 3 ಸಾವಿರ ಬಸ್‌ಗಳನ್ನು ಬಾಡಿಗೆಗೆ ಪಡೆಯಲಾಗಿತ್ತು. ತುಮಕೂರು ನಗರದ ಸರ್ಕಾರಿ ಕಿರಿಯ ಕಾಲೇಜು ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಿಸಿ 60 ಸಾವಿರಕ್ಕೂ ಹೆಚ್ಚು ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಭದ್ರತೆಗಾಗಿ ಸುಮಾರು 4,500ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜನೆಗೊಳಿಸಲಾಗಿತ್ತು. ಸಮಾವೇಶದ ಬಳಿಕ ಮಧ್ಯಾಹ್ನ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಭೋಜನದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಗೃಹ ಸಚಿವ ಡಾ.ಜಿ.ಪರಮೇಶ್ವರ್, ಕಂದಾಯ ಸಚಿವ ಕೃಷ್ಣಭೈರೇಗೌಡ, ಮಾಜಿ ಸಚಿವ ಕೆ.ಎನ್.ರಾಜಣ್ಣ ಸೇರಿದಂತೆ ವಿವಿಧ ನಾಯಕರು ಪ್ರತಿ ಹಂತದಲ್ಲೂ ಕಾರ್ಯಕ್ರಮದ ಪೂರ್ವ ತಯಾರಿಗಳನ್ನು ನಿಗಾವಹಿಸಿದ್ದರು.2023ರ ಮೇ 20ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಾರಿಗೆ ನಿಗಮಗಳ ನೌಕರರು ನಾಳೆಯಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಿದ್ದಾರೆ. ಸಮಾವೇಶಕ್ಕೆ ಜನರನ್ನು ಕರೆ ತರಲು ಸಾರಿಗೆ ಬಸ್‌ಗಳನ್ನು ನಿಯೋಜಿಸಲಾಗಿತ್ತು, ಮುಷ್ಕರದ ಕಾರಣಕ್ಕಾಗಿ ಚಾಲಕರು ಮತ್ತು ನಿರ್ವಾಹಕರು ಕರ್ತವ್ಯಕ್ಕೆ ಹಾಜರಾಗದಿದ್ದರೆ ಸಾರಿಗೆ ವ್ಯವಸ್ಥೆ ಏರುಪೇರಾಗಲಿದೆ ಎಂಬ ಹಿನ್ನೆಲೆಯಲ್ಲಿ ಸಮಾವೇಶವನ್ನು ಒಂದು ದಿನ ಮೊದಲೇ ಪೂರ್ವ ನಿಗದಿ ಮಾಡಲಾಗಿದೆ.

ಅದರಂತೆ ಇಂದು ಬೃಹತ್ ಪ್ರಮಾಣದ ಸಮಾವೇಶ ನಡೆದಿದೆ. ಇದೇ ವೇಳೆ 662 ಕೋಟಿ ರೂ.ಗಳಷ್ಟು ಮೌಲ್ಯದ ವಿವಿಧ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೆರವೇರಿಸಿದ್ದಾರೆ. ಬಹುಮುಖ್ಯವಾಗಿ ಕಂದಾಯ ಇಲಾಖೆಯಿಂದ ಆಸ್ತಿಗಳ ದಾಖಲಾತಿಗಳು ಮತ್ತು ವಿವಿಧ ಯೋಜನೆಯ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಿಸಲಾಗಿದೆ. ಕಳೆದ ಮೂರು ವರ್ಷಗಳಿಂದಲೂ ಕಂದಾಯ ಇಲಾಖೆ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡು ಸುಲಭ ವ್ಯವಸ್ಥೆಗಳನ್ನು ರೂಢಿಸಿಕೊಂಡಿದೆ. ತುಮಕೂರು ಸಮಾವೇಶದಲ್ಲಿಂದು 1,52,492 ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆ. ಅದೇ ರೀತಿ 14.39 ಲಕ್ಷ ಪೌತಿ ಖಾತೆಗಳನ್ನು ನೀಡಲಾಗಿದೆ. ಎರಡೂವರೆ ಲಕ್ಷ ಪೋಡಿ ಕೇಸ್‌ಗಳನ್ನು ಪೂರ್ಣಗೊಳಿಸಲಾಗಿದೆ.

ಕಂದಾಯ ಇಲಾಖೆಯಲ್ಲಿ ಉಪ ವಿಭಾಗಾಧಿಕಾರಿ ಬಳಿ 73 ಸಾವಿರಕ್ಕೂ ಅಧಿಕ ಪ್ರಕರಣಗಳು ಅವಧಿ ಮೀರಿ ಬಾಕಿ ಉಳಿದಿದ್ದವು. ಅವುಗಳಲ್ಲಿ 60 ಸಾವಿರ ಪ್ರಕರಣಗಳನ್ನು ಸಮರೋಪಾದಿಯಲ್ಲಿ ಇತ್ಯರ್ಥ ಪಡಿಸಲಾಗಿದೆ. ಮೂರು ವರ್ಷದ ಸಾಧನಾ ಸಮರ್ಪಣಾ ಸಮಾವೇಶದ ವೇಳೆಗೆ ಬಾಕಿ ಪ್ರಕರಣದ ಸಂಖ್ಯೆಯನ್ನು ಶೂನ್ಯಕ್ಕೆ ತರಬೇಕೆಂಬ ಗುರಿಯೊಂದಿಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಹರಸಾಹಸ ನಡೆಸಿದರು. ಆದರೆ ಕೆಲ ಅಧಿಕಾರಿಗಳ ಅಸಹಕಾರದಿಂದ ಅದು ಸಾಧ್ಯವಾಗಿಲ್ಲ. ಆದರೂ ಗರಿಷ್ಠ ಪ್ರಮಾಣದ ಪ್ರಕರಣಗಳನ್ನು ಇತ್ಯರ್ಥ ಪಡಿಸಿರುವುದಾಗಿ ಸಚಿವ ಕೃಷ್ಣ ಭೈರೇಗೌಡ ಸಂತೃಪ್ತಿ ವ್ಯಕ್ತಪಡಿಸಿದ್ದಾರೆ.

ಇಂದು ಸಮಾವೇಶಕ್ಕೂ ಮುನ್ನ ಸಚಿವ ಕೃಷ್ಣಭೈರೇಗೌಡ ಫಲಾನುಭವಿಗಳ ಜೊತೆ ಸಮಾಲೋಚನೆ ನಡೆಸಿದರು. ಕಂದಾಯ ಇಲಾಖೆಯ ಅಧಿಕಾರಿಗಳು ಯಾವ ರೀತಿ ಸ್ಪಂದಿಸಿದರು ಸರ್ಕಾರದ ಆಶಯದಂತೆ ಸುಲಭ ಹಾಗೂ ಸರಳವಾಗಿ ದಾಖಲಾತಿಗಳನ್ನು ಮಾಡಲಾಯಿತೇ ಯಾರಾದರೂ ಹಣ ಕೇಳಿದರೇ ಅಥವಾ ಅನಗತ್ಯವಾಗಿ ಅಲೆದಾಡಿಸಲಾಯಿತೇ ಎಂಬೆಲ್ಲಾ ವಿವರಗಳನ್ನುಪಡೆದುಕೊಂಡರು. ಫಲಾನುಭವಿಗಳು ಸಚಿವರ ಜೊತೆ ಸಕಾರಾತಕ ಮಾಹಿತಿಗಳನ್ನು ಹಂಚಿಕೊಂಡರು.

# ಚವನಭಾವಿಯಲ್ಲಿ ಭವ್ಯ ಕ್ರಿಕೆಟ್ ಪಂದ್ಯಾವಳಿ ಆರಂಭ



ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ಚವನಭಾವಿ ಗ್ರಾಮದಲ್ಲಿ ಮೂರು ವರ್ಷಗಳಿಗೊಮ್ಮೆ ಜರುಗುವ ಗ್ರಾಮ ದೇವತೆಗಳಾದ ಶ್ರೀ ಗದ್ದೇಮ್ಮದೇವಿ ಹಾಗೂ ಶ್ರೀ ದ್ಯಾಮವ್ವದೇವಿ ಜಾತ್ರಾ ಮಹೋತ್ಸವದ ಅಂಗವಾಗಿ, ಗ್ರಾಮದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಆಯೋಜಿಸಲಾದ ಭವ್ಯ ಕ್ರಿಕೆಟ್ ಪಂದ್ಯಾವಳಿಗೆ ಅದ್ದೂರಿ ಚಾಲನೆ ದೊರೆಯಿತು.

ಗ್ರಾಮದ ಹಿರಿಯರಾದ ಶ್ರೀ ಹುಲಗಪ್ಪ ಮುತ್ತ್ಯಾ ಹಾಗೂ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಹಣಮಂತ ಚ. ನಾಲತವಾಡ ಅವರುಗಳು ಜಂಟಿಯಾಗಿ ರಿಬ್ಬನ್ ಕತ್ತರಿಸುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ಯುವಕರಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಹೊರತರುವಲ್ಲಿ ಇಂತಹ ಕ್ರೀಡಾಕೂಟಗಳು ಮಹತ್ವದ ಪಾತ್ರವಹಿಸುತ್ತವೆ. ಜಾತ್ರಾ ಮಹೋತ್ಸವದ ಜೊತೆಗೆ ಯುವ ಜನತೆಯನ್ನು ಕ್ರೀಡಾ ಚಟುವಟಿಕೆಗಳತ್ತ ಸೆಳೆಯುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಹಿರಿಯರಾದ ಹುಲಗಪ್ಪ ನಾಲತವಾಡ, ಹುಲಗಪ್ಪ ಸೋಮನಾಳ, ಹಣಮಂತ ಬಿರಾದಾರ, ಹುಸನಪ್ಪ ಗೋಗಿ, ದ್ಯಾಮಣ್ಣ ಗುರಿಕಾರ, ಯಮನಪ್ಪ ಸೋಮನಾಳ, ರಾಯಪ್ಪ ಮದರಿ, ರಾಮಣ್ಣ ಕರಿಗಾರ, ವೀರಭದ್ರಯ್ಯ ಮಠ, ಜುಮ್ಮಣ್ಣ ಸಾ. ಕಾರಕೂರ, ಗದ್ದೆಪ್ಪ ಹ. ಬಿರಾದಾರ, ಹಣಮಂತ ಕ. ನಾಲತವಾಡ, ಸುರೇಶ ದ್ಯಾ. ಸೋಮನಾಳ, ಶ್ರೀಕಾಂತ್ ವಾಲಿಕಾರ, ಸಚಿನ್ ನಾಲತವಾಡ, ಅಂಬರೀಷ್ ನಾಲತವಾಡ, ಹಣಮಂತ ಉಂಡಿ, ಪರಸು ಬಾಚ್ಯಾಳ, ಲಕ್ಷ್ಮಣ್ಣ ನಾಲತವಾಡ, ಮಾಳು ಸಿ. ಮದರಿ, ಮಾಳು ಮದರಿ, ಸಿದ್ದು ಉಂಡಿ, ಬಸಪ್ಪ ಬಿರಾದಾರ ಸೇರಿದಂತೆ ಗ್ರಾಮದ ಅನೇಕ ಯುವಕರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## "ನರೇಗಾ ನಿಯಮ ಪಾಲನೆಗೆ ಸೂಚನೆ"

ನೈಜ್ಯ ದೆಸೆ ನ್ಯೂಸ್

ರಾಯಚೂರು: ನರೇಗಾ ಕಾಮಗಾರಿ ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ಕುಡಿಯುವ ನೀರು, ನೆರಳು, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಶಿಶುಪಾಲನಾ ಕೇಂದ್ರಗಳಲ್ಲಿ ಮಕ್ಕಳ ಆರೈಕೆ ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಸ್ಥಳೀಯ ವೈದ್ಯಕೀಯ ನೆರವು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನರೇಗಾ ಯೋಜನೆಯ ಎಲ್ಲ ಅನುಷ್ಠಾನಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರಕುಮಾರ ಕಾಂದೂ ತಿಳಿಸಿದ್ದಾರೆ.



ಬಿಸಿಲು ಹೆಚ್ಚಿರುವ ಕಾರಣ, ಕೂಲಿಕಾರರಿಗೆ ಬೆಳಗಿನ 6 ಗಂಟೆಗೆ ಕಾಮಗಾರಿಯ ಸ್ಥಳಕ್ಕೆ ಹಾಜರಾಗಿ 11.00 ಗಂಟೆಯೊಳಗೆ ನಿಗಡಿಪಡಿಸಿದ ಪ್ರಮಾಣದ ಕೆಲಸವನ್ನು ಮುಗಿಸಿ ಮನೆಗೆ ಹಿಂದಿರುಗುವಂತೆ ಸೂಚಿಸಲಾಗಿದೆ. ಯಾವುದೇ ಕಾರಣಕ್ಕೂ ಮಧ್ಯಾಹ್ನ 12 ಗಂಟೆಯ ನಂತರ ಕಾರ್ಮಿಕರನ್ನು ಬಿಸಿಲಿನ ಝಳ ಹಾಗೂ ಆರೋಗ್ಯದ ದೃಷ್ಟಿಯಿಂದ ಕಾಮಗಾರಿಗಳಲ್ಲಿ ತೊಡಗಿಸದಂತೆ ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಕೂಲಿ ಕಾರ್ಮಿಕರಿಗೆ ಗ್ರಾಮ ಪಂಚಾಯಿತಿಯಿಂದಲೇ ನೀರು ಪೂರೈಸಲಾಗಿದ್ದು, ಕೆಲಸಕ್ಕೆ ಹಾಜರಾಗುವ ಅಂಗವಿಕಲರು ಹಾಗೂ ಹಿರಿಯ ನಾಗರಿಕರಿಗೆ ಕೂಲಿಕಾರರಿಗೆ ಕುಡಿಯಲು ನೀರು ಕೊಡುವ ಜವಾಬ್ದಾರಿ ವಹಿಸಲಾಗಿದೆ ಎಂದು ತಿಳಿಸಿದ್ದಾರೆ. ರಾಯಚೂರು ತಾಲ್ಲೂಕಿನ ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೃತಪಟ್ಟ ಕೂಲಿ ಕಾರ್ಮಿಕ ನಪ್ಪ ಜಂಗ್ಲಪ್ಪ ಅವರ ಪತ್ನಿ ಸತ್ಯಮ್ಮ ಅವರಿಗೆ 2 ಲಕ್ಷ ಪರಿಹಾರ ಕೊಡಲಾಗಿದೆ. ಸಿಂಧನೂರು ತಾಲ್ಲೂಕಿನ ಮುಳ್ಳೂರು (ಇ.ಜೆ.) ಗ್ರಾಮದ ಕೂಲಿಕಾರ ಅಂಬಣ್ಣ ಬಸಣ್ಣ ಅವರ ಕುಟುಂಬಕ್ಕೂ ಪರಿಹಾರ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಮಾನ್ವಿ ತಾಲ್ಲೂಕಿನ ಎಲ್ಲ 17 ಗ್ರಾಮ ಪಂಚಾಯಿತಿಗಳಲ್ಲಿ ಕೂಲಿಕಾರರಿಗೆ ಕುಡಿಯುವ ನೀರು, ನೆರಳಿನ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯಲ್ಲಿ ನರೇಗಾ ಕಾಮಗಾರಿಗಳ ಅನುಷ್ಠಾನದಲ್ಲಿ ಸರ್ಕಾರ ಸೂಚಿಸಿದ ನಿಯಮಗಳಂತೆ ಮೂಲ ಸೌಕರ್ಯ ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ
ಮಾನವಿ
ಎಸ್ ಎಸ್ ಬೋಸರಾಜು ಕಟ್ಟಡ
ಬಸವ ವೃತ್ತ ಹತ್ತಿರ ಮಾನವಿ-584123
Industrial Training Institute
ಕೌಶಲ್ಯ ಭಾರತ
ಸುಶಿಕ್ಷಿತ ಭಾರತ
AUCTION
ಬಹಿರಂಗ ಹರಾಜು ಪ್ರಕಟಣೆ
ಅನುಪಯುಕ್ತ .ಎಮ್.ಎಸ್ . ಸ್ಕ್ರ್ಯಾಪ್ & ವಿವಿಧ (ವಸ್ತುಗಳ)
ಬಹಿರಂಗ ಹರಾಜು
ರಾಯಚೂರು: ಜಿಲ್ಲೆಯ ಮಾನವಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ, ಸಂಸ್ಥೆಯ ತರಬೇತುದಾರರ ಉಪಯೋಗಿಸಿ ಹಿಂದಿರುಗಿಸಿದ ಉಪಪಯುಕ್ತ .ಎಮ್.ಎಸ್ ಸ್ಕ್ರ್ಯಾಪ್ . & ವಿವಿಧ ತ(ವಸ್ತುಗಳ) ಬಹಿರಂಗ ಹರಾಜು ದಿನಾಂಕ : 29-05-2026 ಸಮಯ 10:30 ಕ್ಕೆ ನಡಸಲಾಗುವುದು.
➤ ಮುಂಗಡ ಆಸಕ್ತ ಖರೀದಿದಾರರು, ರೂ:500=00 (ಐದು ನೂರು) ರಶೀದಿಯನ್ನು ಕಚೇರಿಯಲ್ಲಿ ಪಾವತಿಸಿ ನಿಗದಿತ ಸಮಯಕ್ಕೆ ಹಾಜರಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.
➤ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಪ್ರಾಚಾರ್ಯರು
"ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಎಸ್ ಎಸ್ ಬೋಸರಾಜು ಕಟ್ಟಡ ಬಸವ ವೃತ್ತ ಹತ್ತಿರ ಮಾನಿವಿ-584123
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9008989877

## ಸಾಹಿತ್ಯ ಸಿಂಚನ

ಜೇನು

ಹೂವಿನ ಹೃದಯದಿಂದ ಹುಟ್ಟಿದ ಸಿಹಿ,
ಜೇನು ಎಂಬುದು ಪ್ರಕೃತಿಯ ನಿಜದ ಗೀತೆ.
ಮಕರಂದದ ಹನಿ ಹನಿಯಲ್ಲಿ
ಜೀವನದ ಸಿಹಿ ಕಥೆ ಬರೆಯುತ್ತದೆ.

ಜೇನುಹುಳದ ಪರಿಶ್ರಮದ ಫಲ,
ಸಾವಿರ ಹೂಗಳ ಸುವಾಸನೆ ಸೇರಿದ ಕಣ.
ಚಿಕ್ಕದಾದ ಹನಿಯಾದರೂ
ಅದರೊಳಗಿದೆ ಅನಂತ ಮಧುರತನ.

ಬೆಳಗಿನ ಹನಿಯಂತೆ ತಾಜಾ,
ಮನದ ಗಾಯಕ್ಕೆ ಮೃದುವಾದ ಮದ್ದು.
ಜೇನು ಸಿಹಿ ನಾಲಿಗೆಗೆ ಮಾತ್ರವಲ್ಲ,
ಮನಸ್ಸಿಗೂ ನೀಡುತ್ತದೆ ಸಂತಸದ ಬಿದ್ದು.

ಪ್ರಕೃತಿಯ ಕೊಡುಗೆ ಅಮೂಲ್ಯವಾದುದು,
ಪ್ರೀತಿಯಂತೆ ಶುದ್ಧ, ಮಧುರವಾದುದು.
ಜೇನು ಹನಿಯಂತೆ ನಮ್ಮ ಜೀವನವೂ
ಸಿಹಿಯಾಗಿ ಹರಿಯಲಿ ಸದಾಕಾಲವು.

ರಮೇಶ್‌ಜಿ

# ಟಿಬಿ ಖಾಯಿಲೆ ಸಾಂಕ್ರಾಮಿಕ ಒಬ್ಬರಿಂದ ಇನ್ನೊಬ್ಬರಿಗೆ ಮೈಕೊಬ್ಯಾಕ್ಟೀಯಂ ಎಂಬ ರೋಗಾಣು ಮೂಲಕ ಗಾಳಿಯಿಂದ ಹರಡುತ್ತದೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿನೆಡೆಯಿತು ಕ್ಷಯರೋಗ ಮುಕ್ತ ಅಭಿಯಾನ ಜವಳಗೇರಾದ ವಾಲ್ಮೀಕಿ ನಗರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದ ಕುರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಮಾತನಾಡಿ ಜನರಲ್ಲಿ ಜಾಗೃತಿ ಮೂಡಿಸುವ ಕ್ಷಯರೋಗ ಮುಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ನೂರು ದಿನಗಳ ಕ್ಷಯಮುಕ್ತ ಅಭಿಯಾನ ಕಾರ್ಯಕ್ರಮವನ್ನು ಭಾರತವನ್ನು ಸಂಪೂರ್ಣ ಕ್ಷಯಮುಕ್ತ ವಾಗಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರಕಾರ ನೂರು ದಿನಗಳ ಕ್ಷಯಮುಕ್ತ ಅಭಿಯಾನವನ್ನು ಪರಿಣಾಮ ಕಾರಿಯಾಗಿ ಜಾರಿಗೆ ತಂದಿದೆ.

ಈ ಅಭಿಯಾನದ ಮುಖ್ಯ ಉದ್ದೇಶ ಈ ರೋಗದ ವ್ಯಕ್ತಿಗಳನ್ನು ಬೇಗನೆ ಪತ್ತೆ ಹಚ್ಚಿ



ಆರಂಭದ ಹಂತದಲ್ಲಿ ಗುಣಮಟ್ಟದ ಚಿಕಿತ್ಸೆಯನ್ನು ನೀಡುವುದಾಗಿದೆ. ಆರೋಗ್ಯ ನೀರಿಕ್ಷಣಧಿಕಾರಿಗಳು ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಿ ಕ್ಷಯ ರೋಗದ ಲಕ್ಷಣ ಇರುವವರನ್ನು ಪತ್ತೆ ಹಚ್ಚಿ ಚಿಕಿತ್ಸೆ ಒಳಪಡಿಸತ್ತಾರೆ

ನಂತರ ಮಾತನಾಡಿದ ಸಮುದಾಯ ಆರೋಗ್ಯ ಅಧಿಕಾರಿ ಮೇರಿಯವರು ನೂರು ದಿನಗಳ ಕ್ಷಯಮುಕ್ತ ಅಭಿಯಾನ ಕಾರ್ಯಕ್ರಮದಲ್ಲಿ ಅಪಾಯದ ಗುಂಪುಗಳಿಗೆ ಹೆಚ್ಚಾಗಿ ಆದ-ﾟೃತೆ ನೀಡಲಾಗಿ ಪರೀಕ್ಷೆ ಮಾಡಲಾಗುತ್ತದೆ.

ಮದುಮೇಹಿಗಳು ಅಪೌಷ್ಟಿಕತೆಯಿಂದ ಬಳಲುತ್ತಿರುವವರು ಮಧ್ಯ ವಸನಿಗಳು ಧೂಮಪಾನಿಗಳು ಎಚ್‌ಐವಿ ಸೋಂಕಿತರು ಹಾಗೂ ಕ್ಷಯರೋಗಿಗಳ ಸಂಪರ್ಕದಲ್ಲಿ ಇರುವವರು ಗುರುತಿಸಿ ವಿಶೇಷ ಗಮನ ಹರಿಸಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಮತ್ತು ಯಾರಿಗೆ ಎರಡು



ವಾರದ ಹೆಚ್ಚಿನ ಕೆಮ್ಮು ಕೆಮ್ಮಿದಾಗ ಕಪ್ಪದಲ್ಲಿ ರಕ್ತ ಬರುವುದು ದೇಹದ ತೂಕ ಕಡಿಮೆಯಾಗುವುದು ರಾತ್ರಿ ವೇಳೆ ಹೆಚ್ಚಾಗಿ ಜ್ವರ ಬರುವುದು ಅತಿಯಾಗಿ ಬೆವರುವುದು ಇವುಗಳ ಕ್ಷಯರೋಗದ ಲಕ್ಷಣಗಳು ಇರುತ್ತದೆ ಇಂತಹ ವ್ಯಕ್ತಿಗಳು ಕೂಡಲೇ ಹತ್ತಿರದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಕಫ್ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಮತ್ತು ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳುವ ಮೂಲಕ ಉತ್ತಮ ಪೌಷ್ಟಿಕ ಆಹಾರವನ್ನು ಸೇವನೆ ಮಾಡುವ ಮೂಲಕ ಖಾಲೆಯಿಂದ ದೂರ ಇರಬಹುದಾಗಿದೆ ಎಂದರು. ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು ಅಂಬಮ್ಮ. ಅಂಗನವಾಡಿ ಕಾರ್ಯಕರ್ತರಾದ ದುರ್ಗಮ್ಮ. ಆಶಾ ಕಾರ್ಯಕರ್ತೆ ಮಲ್ಲಮ್ಮ . ತಾಯಿಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಭಾನು ವಾರ ಭೂಮಿ ಪೂಜೆ ನೆರವೇರಿಸಿದರು. ನಗರದ ನ್ಯೂ ಎಜುಕೇಶನ್ ಸೊಸೈಟಿ ಯ ಹೊಸ ಉರ್ದು ಮದರಸದ ನೂತನ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.**



ನಂತರ ನಗರದ ಲಿಂಗಸುಗೂರು ರಸ್ತೆಯ ಜಾಮಿಯಾ ರಜಾ ಎ ಮುಸ್ತಫ ಗುಲಶನೆ ರುಜ್ವಿ ಮದರಸದ ನೂತನ ಕೊಠಡಿಗಳಿಗೆ 50 ಲಕ್ಷ ವೆಚ್ಚದ ಕಾಮಗಾರಿ ಹಾಗೂ ಮದರಸ ಎ ಅರಬ್ಬಿಯಾ-ಸಿರಾಜುಲ ಉಲುಮಾ ಮದರಸದ ನೂತನ ಕೊಠಡಿಗಳ ನಿರ್ಮಾಣದ ?50 ಲಕ್ಷ ವೆಚ್ಚದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದರು. ಬಳಿಕ ಸಚಿವ ಎನ್.ಎಸ್.ಬೋಸರಾಜು ಮಾತನಾಡಿ, 'ಕಟ್ಟಡ ಸಂಪೂರ್ಣವಾಗಿ ಗುಣಮಟ್ಟದಿಂದ ಕೂಡಿರಬೇಕು. ಆದಷ್ಟು ಬೇಗ ಕೆಲಸ ಪ್ರಾರಂಭಿಸಿ, ಮಕ್ಕಳಿಗೆ ಅನುಕೂ ಲವಾಗುವ ರೀತಿಯಲ್ಲಿ ಕೆಲಸ ಮುಗಿ ಸಬೇಕು' ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಮದರಸದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಮೂರು ತರಗತಿ, ಎರಡು ವಸತಿ ನಿಲಯದ ಕಟ್ಟಡ, ಡಿಮೆಟ್ರಿ ಸ್ನಾನಗೃಹ ಹಾಗೂ ಶೌಚಾಲಯಗಳ ನಿರ್ಮಾಣ-ಕ್ಕೆ ಮುಂದಾಗಿದ್ದು, ಗುತ್ತೇದಾರರು ಉತ್ತಮವಾದ ರೀತಿಯಲ್ಲಿ ಕಟ್ಟಡ ನಿರ್ಮಿಸಬೇಕು. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಉತ್ತಮ ಶಿಕ್ಷಣ ಪಡೆದುಕೊಳ್ಳಲಿ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕೆ.ಶಾಂತಪ್ಪ, ಜಯಣ್ಣ, ಮಹ್ಮದ್ ಶಾಲಂ, ಶಿವಮೂರ್ತಿ, ರುದ್ರಪ್ಪ ಅಂಗಡಿ, ಯೂಸುಫ್‌ಖಾನ್, ಅಲ್ಲಿ ಸಲ್ಲಾವುದ್ದೀನ್ ಸಾಬ್, ಅಪ್ಪರ ಹುಸೇನಿ, ನರಸಿಂಹಲು ಮಾಡಿಗಿರಿ, ಅಮರೇಗೌಡ ಹಂಚಿನಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗರ್ಭಿಣಿಯಲ್ಲಿ ಗಂಡಾಂತಕಾರಿ ಚಿನ್ಹೆಗಳು ಕಂಡುಬಂದಲ್ಲಿ ನಿರ್ಲಕ್ಷಿಸದೆ ವೈದ್ಯರ ಸಲಹೆ ಹಾಗೂಚಿಕಿತ್ಸೆ ಪಡೆಯಿರಿ




ನೈಜ್ಯ ದೆಸೆ ನ್ಯೂಸ್

**ಮಾನವಿ: ಗರ್ಭಿಣಿಗೆ ಮಾಡಿಸಬೇಕಾದ ತಪಾಸಣೆ ಹಾಗೂ ಚಿಕಿತ್ಸೆಯನ್ನು ತಡ ಮಾಡದಂತೆ ಕುಟುಂಬದ ಸದಸ್ಯರು ಆರೋಗ್ಯ ಇಲಾಖೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಯವರು ನೀಡುವ ಸಲಹೆ ಸೂಚನೆಗಳನ್ನು ಪಾಲಿಸಿ, ಶಿಶು ಹಾಗೂ ತಾಯಿ ಆರೋಗ್ಯ ಸುರಕ್ಷತೆಗೆ ಕೈಜೊಡಿಸಲು ಕುರ್ಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಾದ ಡಾ ಸೌಮ್ಯ ತಿಳಿಸಿದರು.**

ಕುರ್ಡಿ ಗ್ರಾಮದಲ್ಲಿ ಜಿಲ್ಲಾ ಐಇಸಿ ತಂಡದೊಂದಿಗೆ ಮನೆ ಬೇಟಿ ಮಾಡಿದ ವೇಳೆ ಪಾಲಕರೊಂದಿಗೆ ಮಾತನಾಡುತ್ತಾ, ಗರ್ಭಿಣಿ ಅವಧಿಯಲ್ಲಿ ಕಾಲುಬಾವು ಸೇರಿದಂತೆ, ಎತ್ತರ ಕಡಿಮೆ, ಮದುವೆಯಾದ 5 ವರ್ಷಗಳ ನಂತರ ಗರ್ಭಿಣಿಯಾದಲ್ಲಿ, ತೀವ್ರ ರಕ್ತಹೀನತೆ, ಮೊದಲ ಹೆರಿಗೆ ಸಿಜೇರಿಯನ್, ಚೊಚ್ಚಲು ಹೆರಿಗೆ, ಅಧಿಕ ರಕ್ತದೊತ್ತಡ ಇದ್ದ ಸಂದರ್ಭಗಳಲ್ಲಿ ಪಾಲಕರು ನಿಗಾವಹಿಸಬೇಕು. ಅಲ್ಲದೆ ರಕ್ತಹೀನತೆ ಇದ್ದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಿಂದ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಸುಧಾರಣೆಯಾಗದಿದ್ದಲ್ಲಿ ತಜ್ಞ ವೈದ್ಯರಲ್ಲಿಗೆ ಕಳುಹಿಸಿ ಕೊಡಲಾಗುವುದು ವೈದ್ಯರ ಬಳಿ ತಪಾಸಣೆಗೆ ಬರುವಾಗ ತಾಯಿಕಾರ್ಡ್ ಮರೆಯಬಾರದು ಎಂದು ತಿಳಿಸಿದರು.

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಟ 3 ವರ್ಷಕ್ಕೆ ಕಡ್ಡಾಯವಾಗಿ ಮುಂದುಡುವುದು, ತಾತ್ಕಾಲಿಕ ಕುಟುಂಬ ಕಲ್ಯಾಣ ವಿಧಾನಗಳಾದ ಅಂತರ ಚುಚ್ಚುಮದ್ದು, ಕಾಪರ-ಟಿ, ನೀರೊಧ ಮುಂತಾದವುಗಳ ಬಳಕೆಗೆ ಆಧ್ಯತೆ ನೀಡಲು ವಿನಂತಿಸಿದರು. ಇದೆ ವೇಳೆ ಹೆಚ್‌ಪಿವಿ ಲಸಿಕೆ, ಬೇಸಿಗೆ ಮುಂಜಾಗ್ರತೆ, ಏಡ್ಸ್, ಕ್ಷಯರೋಗ, ಕುಷ್ಠರೋಗ ಮಾನಸಿಕ ಆರೋಗ್ಯದ ಉಚಿತ ಸಲಹೆಗಾಗಿ 14416 ಕರೆ ಮಾಡಲು ಆರೋಗ್ಯ ಶಿಕ್ಷಣ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರಾಜೇಂದ್ರ, ಆರೋಗ್ಯ ನಿರೀಕ್ಷಣಾಧಿಕಾರಿ ಅನೀಲ್‌ಕುಮಾರ್, ಪ್ರಾಥ-'ಮಿಕ ಆರೋಗ್ಯ ಸುರಕ್ಷಾಧಿಕಾರಿ ಸುಜಾತಾ, ಆಶಾ ಕಾರ್ಯಕರ್ತೆ ಶೀಲ್ಪಾ, ತಾಯಂದಿರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಪ್ರಾಣಿಗಳ ಹತ್ಯೆ ತಡೆಗಟ್ಟಲು ಸೂಕ್ತ ಕ್ರಮ ವಹಿಸಿ: ಜಿಲ್ಲಾಧಿಕಾರಿ ಎಸ್.ಪೂವಿತಾ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಲ್ಲಿ ಬಕ್ರೀದ್ ಹಬ್ಬದ ದಿನಗಳಲ್ಲಿ ಅಕ್ರಮ ಒಂಟೆ ಹಾಗೂ ಗೋವುಗಳ ಹತ್ಯೆ ತಡೆಗಟ್ಟಲು ಸೂಕ್ತ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾ-ರಿಗಳಾದ ಎಸ್.ಪೂವಿತಾ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಮೇ.19ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬಕ್ರೀದ್ ಹಬ್ಬದ ಹಿನ್ನಲೆಯಲ್ಲಿ ಅಕ್ರಮ ಒಂಟೆ ಹಾಗೂ ಗೋವುಗಳ ಹತ್ಯೆ ತಡೆಗಟ್ಟಲು ಅಧಿಕಾರಿಗಳಿಗೆ ಕರೆದ ಜಿಲ್ಲಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

ಸರಕಾರದ ಆದೇಶ ಪಾಲನೆ ಮಾಡುವ ಮೂಲಕ ಬಕ್ರೀದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಸಾರ್ವಜನಿ-ರಿಗೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಂದ ಜಾಗೃತಿ ಮೂಡಿಸಬೇಕು. ದನಕರುಗಳು ಮತ್ತು ಗೋವುಗಳ ಹತ್ಯೆ ನಿಷೇಧವಿದ್ದು, ಸರಕಾರದ ಆದ-'ೀಶವನ್ನು ಎಲ್ಲರೂ ಪಾಲನೆ ಮಾಡಬೇಕು ಎಂದರು. ಜಿಲ್ಲೆಯಲ್ಲಿ ಮೇ. 28ರಿಂದ 3 ದಿನಗಳ ಕಾಲ ನಡೆಯುವ ಬಕ್ರೀದ್ ಹಬ್ಬದ ಪ್ರಯುಕ್ತ ಜಾನುವಾರು ಸಾಗಾಣಿಕೆ ಕಾಯಿದೆ 2006, ಕರ್ನಾಟಕ ಪ್ರಾಣಿ ಬಲಿ ನಿಷೇಧ ಕಾಯಿದೆ 1959, ಪ್ರಾಣಿ ಹಿಂಸೆ ಪ್ರತಿಬಂಧಕ ಕಾಯಿದೆ 1960, ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಅಧಿನಿಯಮ 1964, ವಧಾಗಾರ ನಿಯಮ 2001, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಆದ್ಯಾದೇಶ-2020, ಕಾಲುನಡಿಗೆ ಮೂಲಕ ಪ್ರಾಣಿಗಳ ಸಾಗಾಣಿಕೆ ನಿಯಮ,



ಮನೋರಂಜನೆಗಾಗಿ ಪ್ರದರ್ಶನ ಮಾಡುವ ಪ್ರಾಣಿಗಳ ನಿಯಮಗಳು 1973, ಪ್ರಾಣಿ ಹಿಂಸಾ ಪ್ರತಿಬಂಧಕ ನಿಯಮಗಳು 1978ರಡಿ ಎಲ್ಲಾ ವಯಸ್ಸಿನ ಆಕಳು,

ಆಕಳ ಕರು, ಹೋರಿ ಮತ್ತು ಎತ್ತು ಹಾಗೂ 13 ವರ್ಷದೊಳಗಿನ ಕೋಣ ಮತ್ತು ಎಮ್ಮೆಗಳನ್ನು ಹತ್ಯೆ ನಡೆಸತಕ್ಕದ್ದಲ್ಲ. ಗರ್ಭವಿರುವ ಪ್ರಾಣಿಗಳನ್ನು ವಧೆ ಮಾಡುವಂತಿಲ್ಲ. 03 ತಿಂಗಳ ಕೆಳಗಿನ ವಯಸ್ಸಿನ ಪ್ರಾಣಿಗಳನ್ನು ವಧೆ ಮಾಡುವಂತಿಲ್ಲ. ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಕಡ್ಡಾಯವಾಗಿ ಜಾನುವಾರ ಸಾಗಾಣಿಕೆ ಕಾಯಿದೆ 2006ರಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪಾಲಿಸುವಂತೆ ಸಾರ್ವಜನಿಕ-ರಿಗೆ ತಿಳುವಳಿಕೆ ನೀಡಬೇಕು. ಒಂದು ವೇಳೆ ಕಾಯಿದೆಯಲ್ಲಿನ ಯಾವುದಾದರೂ ಅಂಶಗಳನ್ನು ಉಲ್ಲಂಘಿಸಿದ್ದಲ್ಲಿ ಸಂಬಂಧಪಟ್ಟ ಇಲಾಖೆಗಳಾದ ನಗರ ಸ್ಥಳೀಯ ಸಂಸ್ಥೆಗಳು,

ಪಶು ಸಂಗೋಪಣೆ ಇಲಾಖೆ ಮತ್ತು ಸಾರಿಗೆ ಇಲಾಖೆ ಅವರು ಪೊಲೀಸ್ ಇಲಾಖೆಯ ಗಮನಕ್ಕೆ ತರಬೇಕು ಎಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪ್ರತಿಯೊಂದು ಹೆದ್ದಾರಿಯಲ್ಲಿ ಇತರೆ ರಾಜ್ಯಗಳಿಂದ ಜಿಲ್ಲೆಗೆ ಪ್ರವೇಶಿಸುವ ಮತ್ತು ರಾಯಚೂರು ಜಿಲ್ಲೆಯಿಂದ ಹೊರ ರಾಜ್ಯಗಳಿಗೆ ಸಾಗಿಸಲ್ಪಡುವ ಜಾನುವಾರುಗಳ ಕುರಿತು ನಿಗಾವಹಿಸಲು ಈಗಾಗಲೇ ಸ್ಥಾಪಿಸಲಾಗಿರುವ ಅರಕ್ಷಕ ಇಲಾಖೆಯ ಚೆಕ್ ಪೋಸ್ಟ್‌ಗಳಲ್ಲಿ ಪಶು ಸಂಗೋಪಣೆ ಇಲಾಖೆ ಮತ್ತು ಸಾರಿಗೆ ಇಲಾಖೆಯ ಸಿಬ್ಬಂದಿಗಳನ್ನು ದಿನದ 24ಗಂಟೆಗಳ ಕಾಲ ಕಡ್ಡಾಯವಾಗಿ ನಿಯೋಜಿಸುವಂತೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ ಅವರು ಮಾತನಾಡಿ, ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು ಹಾಗೂ ಮುಖ್ಯಾಧಿಕಾರಿಗಳು ಬಕ್ರೀದ್ ಹಬ್ಬದ ಪ್ರಯುಕ್ತ ಉತ್ಪತ್ತಿಯಾಗುವ ತ್ಯಾಜ್ಯವನ್ನು ವಿಲೇ ಮಾಡಲು ಸಾರ್ವಜನಿಕರ ಮನೆಯ ಬಾಗಿಲುಗಳಿಗೆ ಬರುವ ನಗರ ಸ್ಥಳೀಯ ಸಂಸ್ಥೆಗಳ ವಾಹನಗಳಿಗೆ ವ್ಯವಸ್ಥಿತವಾಗಿ ಸೋ-ರಿಕೆಯಾಗದಂತೆ ಚೀಲಗಳಲ್ಲಿ ಕಟ್ಟಿ ನೀಡುವಂತೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕು. ಘನತ್ಯಾಜ್ಯ ವಸ್ತು ವಿಲೇವಾರಿ ವಾಹನಗಳ ಮೂಲಕ ಈ ಕುರಿತು ಜಿಂಗಲ್ ಪ್ರಸಾರ ಮಾಡುವಂತೆ ಸೂಚಿಸಿದರು.

ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸುಮಾರು 10*10 ಅಡಿಯಷ್ಟು ಗುಂಡಿಯನ್ನು ತೋಡಿ, ಈ ತ್ಯಾಜ್ಯವನ್ನು ನಿಯಮಾನುಸಾರ ಮುಚ್ಚಲು ಕ್ರಮವಹಿಸಬೇಕು. ಈ ಕಾರ್ಯಕ್ಕಾಗಿ ನಗರ ಸ್ಥಳೀಯ ಸಂಸ್ಥೆಗಳು ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ತಿಮ್ಮಪ್ಪ ಬಿರಾದಾರ್, ರಾಯಚೂರು ಮಹಾನಗರ ಪಾಲಿಕೆಯ ಜೋನಲ್-01ರ ಉಪ ಆಯುಕ್ತ ಮಲ್ಲಿಕಾರ್ಜುನ, ಸಹಾಯಕ ಆಯುಕ್ತರ ಕಚೇರಿಯ ತಹಶೀಲ್ದಾರ್ ರಾಜಶೇಖರ, ಪಶು ಸಂಗೋಪಣೆ ಇಲಾಖೆ ಉಪ ನಿರ್ದೇಶಕ ಪೋಮ್ ಸಿಂಗ್, ರಾಯಚೂರು ಸಿಪಿಐ ಉಮೇಶ ಕಾಂಬಳೆ ಸೇರಿದಂತೆ ವಿವಿಧ ಇಲಾಖೆಗಳಾದ ಸಾರಿಗೆ, ಪುರಸಭೆ, ಪಟ್ಟಣ ಪಂಚಾಯತ್, ಆರೋಗ್ಯ ನಿರೀಕ್ಷಕರು ಸಭೆಯಲ್ಲಿ ಇದ್ದರು.

# 20 ಮೇ ದೇವದುರ್ಗ ತಾಲೂಕಿನ ಎಲ್ಲಾ ಔಷಧಿ ಅಂಗಡಿಗಳು ಒಂದು ದಿನ ಬಂದ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ದೇವದುರ್ಗ ತಾಲೂಕು ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಒಂದು ದಿನದ ಔಷಧಿ ಅಂಗಡಿಗಳ ಬಂದ್ ಕು-ರಿತು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.**

ಸುದ್ದಿಗಾರರೊಂದಿಗೆ ಮಾತನಾಡಿದ ಸಂಘದ ಅಧ್ಯಕ್ಷ ಪ್ರಭುಗೌಡ ಹಾಗೂ ಖಜಾಂಚಿ ವೀರೇಶ್ ಗೌಳಿ ಅವರು, ದೇವದುರ್ಗ ತಾಲೂಕು ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ವೆಲ್ಫೇರ್ ಅಸೋಸಿಯೇಷನ್ ರಾಯಚೂರು ಜಿಲ್ಲಾ ಘಟಕದ ಅಂಗಸಂಸ್ಥೆಯಾಗಿದ್ದು, ಕರ್ನಾಟಕ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್ ಹಾಗೂ ದೇಶ ಮಟ್ಟದ ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ (AIOCD) ಸಂಘಟನೆಗೆ ಸಂಬಂಧಪಟ್ಟಿದೆ ಎಂದು ತಿಳಿಸಿದರು.

ದೇಶದಾದ್ಯಂತ 12.40 ಲಕ್ಷಕ್ಕೂ ಹೆಚ್ಚು ಔಷಧ ವ್ಯಾಪಾರಿಗಳು ಮತ್ತು ವಿತರಕರನ್ನು ಪ್ರತಿನಿಧಿಸುವ ೦ಖಔಅಆ ಸಂಘಟನೆ, ಹಲವು ವರ್ಷಗಳಿಂದ ಬಾಕಿ ಉಳಿದಿರುವ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ 20 ಮೇ 2026 ರಂದು ದೇಶವ್ಯಾಪಿ ಒಂದು ದಿನದ ಔಷಧ



ವ್ಯಾಪಾರ ಬಂದ್‌ಗೆ ಕರೆ ನೀಡಿದೆ ಎಂದು ಹೇಳಿದರು. ಇ-ಫಾರ್ಮಸಿಗಳ ನಿಯಂತ್ರಣರಹಿತ ಬೆಳವಣಿಗೆ ಹಾಗೂ ದೊಡ್ಡ ಕಂಪನಿಗಳ ಡೀಪ್ ಡಿಸ್ಕೌಂಟಿಂಗ್ ನೀತಿಯಿಂದ ಸಣ್ಣ ಮತ್ತು ಮಧ್ಯಮ ಮಟ್ಟದ ಔಷಧ ವ್ಯಾಪಾರಿಗಳಿಗೆ ಭಾರೀ ಹೊಡೆತ ಬಿದ್ದಿದ್ದು, ಸಾರ್ವಜನಿಕ ಆರೋಗ್ಯಕ್ಕೂ ಅಪಾಯ ಉಂಟಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. "ಔಷಧಿಗಳು ಸಾಮಾನ್ಯ ವಸ್ತುಗಳಲ್ಲ. ಅವು ನೇರವಾಗಿ ರೋಗಿಗಳ ಸುರಕ್ಷತೆಯೊಂದಿಗೆ ಸಂಬಂಧ ಹೊಂದಿವೆ.

ಅರ್ಹ ವೈದ್ಯರು ಮತ್ತು ನೋಂದಾಯಿತ ಫಾರ್ಮಸಿಸ್ಟ್‌ಗಳ ಮೂಲಕ ಸರಿಯಾದ ಔಷಧ ಸರಿಯಾದ ರೋಗಿಗೆ ತಲುಪುವ ವ್ಯವಸ್ಥೆಯನ್ನು ಕಾಪಾಡುವುದು ಅಗತ್ಯ" ಎಂದು ಸಂಘದ ಪದಾಧಿಕಾರಿಗಳು ಹೇಳಿದರು. ಇದೇ ವೇಳೆ ಕೋವಿಡ್ ಅವಧಿಯಲ್ಲಿ ಜಾರಿಗೆ ತಂದಿದ್ದ 26-03-2020ರ ಉಖಖ 220(ಇ) ಅಧಿಸೂಚನೆಯನ್ನು ಈಗಲೂ ಮುಂದುವ-ರಿಸಲಾಗುತ್ತಿದ್ದು, ಅದರ ದುರುಪಯೋಗದಿಂದ ಔಷಧ ನಿಯಮಗಳ ಭದ್ರತಾ ಕ್ರಮಗಳು ಕಡೆಗಣನೆಯಾಗುತ್ತಿವೆ ಎಂದು ಆರೋಪಿಸಿದರು.

ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ

## ಪ್ರಮುಖ ಬೇಡಿಕೆಗಳು:

- ಅನಧಿಕೃತ ಇ-ಫಾರ್ಮಸಿ ಕಾರ್ಯಾಚರಣೆಗಳನ್ನು ನಿಲ್ಲಿಸುವುದು
- 28-08-2018ರ GSR 817(E) ಅಧಿಸೂಚನೆಯನ್ನು ಹಿಂತೆಗೆದುಕೊಳ್ಳುವುದು
- ದೊಡ್ಡ ಕಂಪನಿಗಳ ಅನ್ಯಾಯಕರ ಬೆಲೆ ನೀತಿಯನ್ನು ತಡೆಯುವುದು
- 26-03-2020ರ GSR 220(E) ಅಧಿಸೂಚನೆಯನ್ನು ಹಿಂತೆಗೆದುಕೊಳ್ಳುವುದು

## ಸಾರ್ವಜನಿಕ ಆರೋಗ್ಯಕ್ಕೆ ಉಂಟಾಗುವ ಅಪಾಯಗಳು

- ವೈದ್ಯರ ಚೀಟಿ ಇಲ್ಲದೆ ಔಷಧ ಮಾರಾಟ
- ವೈದ್ಯರ ಚೀಟಿಗಳ ದುರುಪಯೋಗ
- ಆಂಟಿಬಯೋಟಿಕ್ ಮತ್ತು ವ್ಯಸನಕಾರಿ ಔಷಧಿಗಳ ಸುಲಭ ಲಭ್ಯತೆ
- ನಕಲಿ ವೈದ್ಯರ ಚೀಟಿಗಳ ಬಳಕೆ
- ಔಷಧಗಾರ ಮತ್ತು ರೋಗಿಯ ನಡುವೆ ನೇರ ಸಂಪರ್ಕದ ಕೊರತೆ
- ನಕಲಿ ಹಾಗೂ ಸರಿಯಾಗಿ ಸಂಗ್ರಹಿಸದ ಔಷಧಿಗಳ ಅಪಾಯ
- ಆಂಟಿ ಮೈಕ್ರೋಬಿಯಲ್ ರೆಸಿಸ್ಟೆನ್ಸ್ (AMR) ಹೆಚ್ಚಳ

ನ್ಯಾಯಸಮ್ಮತ ವ್ಯಾಪಾರ ನೀತಿಗಳನ್ನು ಜಾ-ರಿಗೆ ತರಬೇಕು ಹಾಗೂ ಲಕ್ಷಾಂತರ ಔಷಧ ವ್ಯಾಪಾರಿಗಳ ಜೀವನೋಪಾಯವನ್ನು ರಕ್ಷಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಪ್ರಭುಗೌಡ, ಖಜಾಂಚಿ ವೀರೇಶ್ ಗೌಳಿ, ರಾಮಮೂರ್ತಿ ಕೃಷ್ಣ ಮೆಡಿಕಲ್, ಇರ್ಫಾನ್ ಜನತಾ ಮೆಡಿಕಲ್, ಚಂದ್ರಶೇಖರ್ ಬಸವ ಮೆಡಿಕಲ್, ರವಿ ಸಂಜೀವಿನಿ ಮೆಡಿಕಲ್, ವಿನೋದ್ ಕುಮಾರ್ ಭವಾನಿ ಮೆಡಿಕಲ್, ಶಂಭುಗೌಡ ಪೂಜಾ ಮೆಡಿಕಲ್, ಪ್ರದೀಪ್ ಕಾರ್ತಿಕ್ ಮೆಡಿಕಲ್ ಹಾಗೂ ಆರ್‌ಕೆ ಹಾಸ್ಪಿಟಲ್ ಪ್ರತಿನಿಧಿಗಳು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

## ನೇಮಕಾತಿ ಪ್ರಕಟಣೆ

KSP ನೇಮಕಾತಿ 2026 41 ಎಂಜಿನ್ ಚಾಲಕ (ಹೆಡ್ ಕಾನ್ಸ್‌ಟೇಬಲ್ ಗ್ರೇಡ್) ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 19, 2026 KSP ನೇಮಕಾತಿ 2026: 41 ಎಂಜಿನ್ ಚಾಲಕ (ಹೆಡ್ ಕಾನ್ಸ್‌ಟೇಬಲ್ ಗ್ರೇಡ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ಭಾರತ ಗೃಹ ಸಚಿವಾಲಯವು ಕರ್ನಾಟಕದ ಕೋಸ್ಟಲ್ ಸೆಕ್ಯು-ರಿಟಿ ಸ್ಕೀಮ್ ಹಂತ-1 ರ ಅಡಿಯಲ್ಲಿ ಕೋಸ್ಟಲ್ ಸೆಕ್ಯುರಿಟಿ ಪೊಲೀಸ್ ಠಾಣೆಗಳಿಗೆ ಅನುಮತಿ ನೀಡಿದೆ) ಮೇ 2026 ರ KSP ಅಧಿಕೃತ ಅಧಿಸೂಚನೆಯ ಮೂಲಕ ಎಂಜಿನ್ ಚಾಲಕ (ಹೆಡ್ ಕಾನ್ಸ್‌ಟೇಬಲ್ ಗ್ರೇಡ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಉಡುಪಿ, ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 06-ಜೂನ್-2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 08-05-2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06-ಜೂನ್-2026 ಅಧಿಕೃತ ವೆಬ್‌ಸೈಟ್: ksp.karnataka.gov.in

# ಬಳಗಾನೂರಿನ ಶಿಕ್ಷಣ ಕನಸಿಗೆ ಹೊಸ ಚಿಗುರು

**ನೈಜ್ಯ ದೆಸೆ ನ್ಯೂಸ್**

**ಬಳಗಾನೂರು: 2025-26ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಘೋಷಿತವಾದ ಮಹತ್ವಾಕಾಂಕ್ಷಿ ಯೋಜನೆಯಡಿ ರಾಜ್ಯದ ಅರ್ಹ 50 ಪ್ರೌಢಶಾಲೆಗಳನ್ನು ಪದವಿಪೂರ್ವ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮದಲ್ಲಿ ಮಸ್ಕಿ ತಾಲೂಕಿನ ಬಳಗಾನೂ-ರಿನ ಸರಕಾರಿ ಪ್ರೌಢಶಾಲೆಯೂ ಆಯ್ಕೆಯಾಗಿದ್ದು, ಇದೀಗ ನೂತನ ಸರಕಾರಿ ಪದವಿಪೂರ್ವ ಕಾಲೇಜಾಗಿ ರೂಪಾಂತರಗೊಂಡಿದೆ. ಈ ಬೆಳವಣಿಗೆ ಪಟ್ಟಣದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಭರವಸೆಯ ಕಿರಣ ಮೂಡಿಸಿದೆ.**

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಮುಂದಿನ ಮೂರು ವರ್ಷಗಳ ಕಾಲ ವೇತನ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಬಂಧನೆಯಡಿ



ಕಾಲೇಜು ಆರಂಭಗೊಂಡಿದೆ. ನೂತನ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾಗಿ ನಿಯೋಜನೆಗೊಂಡಿರುವ ಮಸ್ಕಿ ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕರಾದ ರಂಗಯ್ಯ ಶ್ರೇಷ್ಠಿಯವರು ಸೋಮವಾರ ಬಳಗಾನೂರಿಗೆ ಆಗಮಿಸಿದ ವೇಳೆ, ಸರಕಾರಿ ಪದವಿಪೂರ್ವ ಕಾಲೇಜು ಹೋರಾಟ ಸಮಿತಿಯ ವತಿಯಿಂದ ಆತ್ಮೀಯ ಸ್ವಾಗತ ಹಾಗೂ ಗೌರವ ಸನ್ಮಾನ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡ ರಾಘವೇಂದ್ರ ಕುಲಕರ್ಣಿ, ಉಪನ್ಯಾಸಕರಾದ ಗೋವಿಂದರಡ್ಡಿ ಗದ್ದಿ ಹಾಗೂ ಸುರೇಶ ಬಳಗಾನೂರು ಅವರು ಶ್ರೇಷ್ಠಿಯವರನ್ನು ಸನ್ಮಾನಿಸಿದರು.ಸನ್ಮಾನ ಸ್ವೀಕರಿಸಿ ಮಾತನಾಡಿದ ರಂಗಯ್ಯ ಶ್ರೇಷ್ಠಿಯವರು, "ಈ ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಗಾಗಿ ನಿಮ್ಮೆಲ್ಲರ ಸಹಕಾರದೊಂದಿಗೆ ಕಾಯಾ, ವಾಚಾ, ಮನಸಾ ಸೇವೆ ಸಲ್ಲಿಸುತ್ತೇನೆ. ಕಾಲೇಜಿನ ಪ್ರಚಾರ, ದಾಖಲಾತಿ ಮತ್ತು ಪ್ರಗತಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸೋಣ" ಎಂದು ಹೇಳಿದರು.

ನಂತರ ಶಿಕ್ಷಕ ರಫಿಯುದ್ದೀನ್, ಮುಖಂಡ ರಾಘವೇಂದ್ರ ಕುಲಕರ್ಣಿ,ಉಪನ್ಯಾಸಕರಾದ ಸುರೇಶ ಬಳಗಾನೂರು ಹಾಗೂ ಗೋವಿಂದರಡ್ಡಿ ಗದ್ದಿ ಮಾತನಾಡಿ ಕಾಲೇಜಿನ ಅಭಿವೃದ್ಧಿಗೆ ಜನಸಹಕಾರ ಅಗತ್ಯವೆಂದು ಅಭಿಪ್ರಾಯಪಟ್ಟರು.ಅತಿಥಿ ಶಿಕ್ಷಕ ಸುರೇಶ ಕಾರ್ಯಕ್ರಮ ನಿರೂಪಿಸಿದರು. ಕರಣಿಕ ಶ್ರೀನಿವಾಸ ಕುಲಕರ್ಣಿ, ಅತಿಥಿ ಶಿಕ್ಷಕ ಬಸವರಾಜ ಪೂಜಾರ್, ಪಾಲಕ ಅಯ್ಯಪ್ಪ ವಿಶ್ವಕರ್ಮ ಉಪಸ್ಥಿತರಿದ್ದರು. **ವರದಿ: ಸುರೇಶ ಬಳಗಾನೂರು**

## ಜೂನ್ 20 ರಿಂದ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಆರಂಭ: ಜಿಲ್ಲಾ ಚುನಾವಣಾಧಿಕಾರಿ ಎಸ್.ಪೂವಿತಾ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಮೂರನೇ ಹಂತದಲ್ಲಿ ಕರ್ನಾಟಕ ರಾಜ್ಯದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪಟ್ಟಿ ತಯಾರಿಸುವ ಕುರಿತು ವೇಳಾಪಟ್ಟಿ ಪ್ರಕಟಿಸಿದ್ದು, ರಾಯಚೂರು ಜಿಲ್ಲೆಯಲ್ಲಿ ಜೂನ್ 20 ರಿಂದ ಪ್ರಕ್ರಿಯೆಯು ಆರಂಭವಾಗಲಿದ್ದು ಅಕ್ಟೋಬರ್ 7ಕ್ಕೆ ಮುಕ್ತಾಯವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಎಸ್.ಪೂವಿತಾ ಅವರು ತಿಳಿಸಿದ್ದಾರೆ.**



ದಿನಾಂಕ:01.10.2026 ಅನ್ನು ಅರ್ಹತಾ ದಿನಾಂಕವನ್ನಾಗಿ ಪರಿಗಣಿಸಿ ಈ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ಕಾರ್ಯ ನಡೆಯಲಿದೆ. ಜೂನ್ 20 ರಿಂದ 29ರವರೆಗೆ ಈ ಪ್ರಕ್ರಿಯೆಯ ಸಿದ್ಧತೆ, ಪ್ರಕ್ರಿಯೆಯ ಭಾಗವಾಗಿರುವ ಎಲ್ಲಾ ಹಂತದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ, ಅವಶ್ಯವಿರುವ ದಾಖಲೆಗಳ ಮುದ್ರಣ ಕಾರ್ಯ ಜರುಗಲಿದೆ. ತದನಂತರ ಜೂನ್ 30 ರಿಂದ ಜುಲೈ 29ರವರೆಗೆ ಈ ಜಿಲ್ಲೆಯ 07 ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 1853 ಮತಗಟ್ಟೆ ಮಟ್ಟದ ಅಧಿಕಾರಿಗಳು(ಬಿ.ಎಲ್.ಓ.ಗಳು) ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಎಣಿಕೆ ನಮೂನೆಗಳನ್ನು ನೀಡಿ ಮಾಹಿತಿಯನ್ನು ಸಂಗ್ರಹಿಸುವರು, ದಿನಾಂಕ:05.08.2026 ರಂದು ಈ ಪ್ರಕ್ರಿಯೆಯ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಕರಡು ಮತದಾರರ ಪಟ್ಟಿಗೆ ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರವರೆಗೆ ಆಕ್ಷೇಪಣೆಗಳನ್ನು ಆಹ್ವಾನಿಸಿ ಅಕ್ಟೋಬರ್ 3ರೊಳಗೆ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ ಕೊನೆಗೆ ಅಕ್ಟೋಬರ್ 7ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವೇಳಾ ಪಟ್ಟಿಯನ್ವಯ ಸದರಿ ಪ್ರಕ್ರಿಯೆಯ ಎಲ್ಲಾ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಜಿಲ್ಲೆಯ ಎಲ್ಲಾ 7 ವಿಧಾನ ಸಭಾ ಮತಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ. ಇದಲ್ಲದೆ ಭಾರತ ಚುನಾವಣಾ ಆಯೋಗದ ನಿರ್ದೇಶನ ಹಾಗೂ ಸುತ್ತೋಲೆಗಳನ್ವಯ ವಿಧಾನಸಭಾ ಮತಕ್ಷೇತ್ರವಾರು ಮತಗಟ್ಟೆ ಮಟ್ಟದ ಏಜೆಂಟರನ್ನು (ಬಿಎಲ್ಎ) ನೇಮಕ ಮಾಡುವ ಕುರಿತು ನೋಂದಾಯಿತ ರಾಜಕೀಯ ಪಕ್ಷದವ-ರಿಗೂ ತಿಳಿಸಲಾಗಿದೆ. ಎಸ್.ಐ.ಆರ್ ಕುರಿತು ಸಾರ್ವಜನಿಕರಲ್ಲಿ ಯಾವುದೇ ರೀತಿ ಗೊಂದಲಗಳಿದ್ದಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳನ್ನು ಸಂಪರ್ಕಿಸುವಂತೆ ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲೆಯ ಜಿಲ್ಲಾಧಿಕಾ-ರಿಗಳಾದ ಎಸ್.ಪೂವಿತ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ



**ನೈಜ್ಯ ದೆಸೆ ನ್ಯೂಸ್**

**ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಜ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಶ್ರೀ ಬಸವ ಪ್ಯಾರಾ ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜ್ ಸಿಂದನೂರ್ ಇವರ ಸಂಯುಕ್ತ ಆಶ್ರಯದಲ್ಲಿ ಡೆಂಗ್ಯೂ ಜ್ವರದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಸದರಿ ಕಾರ್ಯಕ್ರಮವನ್ನು ಸಸಿಗೆ ನೀರು ಉಣಿಸುವ ಮೂಲಕ ಉದ್ಘಾಟಿಸಿ ಕಾರ್ಯಕ್ರಮವನ್ನು ಆಚರಿಸಲಾಯಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ್ ತಾಲೂಕು ಆರೋಗ್ಯಾಧಿಕಾ-ರಿಗಳ ಕಾರ್ಯಾಲಯ ಸಿಂಧನೂರು ಇವರು ಮಾತನಾಡಿ ಸೊಳ್ಳೆಗಳಿಂದ ಹರಡುವ ಕಾಯಿಲೆಗಳು ಸೊಳ್ಳೆ ಉತ್ಪತ್ತಿ ತಾಣಗಳು, ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ಸೊಳ್ಳೆ ಪರದೆ ಮತ್ತು ಸೊಳ್ಳೆ ನಿರೋಧಕ ದ್ರಾವಣ ಬತ್ತಿ ಓಡೋ ಮಾಸ್ ಬೇವಿನ ಸೊಪ್ಪಿನ ಹೊಗೆ ಗ್ಯಾಂಬೂಸಿಯ ಗಪ್ಪಿ ಮೀನುಗಳು ಟೆಮಿಫಾಸ್ ದ್ರಾವಣ ಇವುಗಳ ಬಗ್ಗೆ ಮತ್ತು ಡೆಂಗಿ ನಿಯಂತ್ರಣಕ್ಕಾಗಿ "ಸಮುದಾಯದ ಸಹಭಾಗಿತ್ವ, ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ ""ಎಂಬ ಘೋಷವಾಕ್ಯದ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಯಿತು . ಡೆಂಗ್ಯೂ ಜ್ವರದ ಲಕ್ಷಣಗಳು ಚಿಕಿತ್ಸೆಯ ಬಗ್ಗೆ ತಿಳಿಸಿಕೊಡಲಾಯಿತು, ನಂತರ ವಿಶ್ವ ರಕ್ತದೊತ್ತಡ ದಿನಾಚರಣೆಯನ್ನುಆಚ-ರಿಸಲಾಯಿತು,ಸದರಿ ಕಾರ್ಯಕ್ರಮದಲ್ಲಿ ಮೇಘಾ, ಮಂಜುಳಾ, ಕವಿತಾ,ಶಂಶಾದ ಭಿ, ವಿದ್ಯಾರ್ಥಿ/ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಅತ್ಯಾಚಾರದ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಕರ್ನಾಟಕ ಭೀಮ್ ಸೇನೆ ಒತ್ತಾಯ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಬೀದರ್ ಜಿಲ್ಲೆಯ ಔರಾದ ತಾಲೂಕಿನ ಅಪ್ರಾಪ್ತ ಬಾಲಕಿಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಎಸ್‌ಐಟಿ ತಂಡ ರಚಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಕರ್ನಾಟಕ ಭೀಮ್ ಸೇನೆಯ ತಾಲೂಕು ಅಧ್ಯಕ್ಷ ಕಿರಣ್ ಕುಮಾರ್ ಛಲವಾದಿ ಆಗ್ರಹಿಸಿದರು.**

ಪಟ್ಟಣದ ತಹಶೀಲ್ದಾರ್ ಕಚೇರಿ ಮೂಲಕ ರಾಜ್ಯ ಗೃಹ ಸಚಿವರಿಗೆ ಸಲ್ಲಿಸಿದ ಮನವಿ ಪತ್ರದ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ದಲಿತರ ಮೇಲೆ ನಿರಂತರವಾಗಿ ದೌರ್ಜನ್ಯ, ಅತ್ಯಾಚಾರ, ಕೊಲೆ ಪ್ರಕರಣಗಳು ಹೆಚ್ಚಾಗುತ್ತಿದ್ದರೂ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.



ಔರಾದ ತಾಲೂಕಿನ ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಎಸ್‌ಐಟಿ ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದರು.

ಮುಂದುವರಿದು ಪ್ರಕರಣದ ಪ್ರಮುಖ ಆರೋಪಿಗಳ ವಿರುದ್ಧ ಅಪಹರಣ, ಪೋಕ್ಸೋ ಸೇ-ರಿದಂತೆ ವಿವಿಧ ಕಾನೂನುಗಳ ಅಡಿಯಲ್ಲಿ ಕಠಿಣ ಕ್ರಮ ಜರುಗಿಸಬೇಕು. ಬಾಲಕಿಯ ಶವವನ್ನು ಮರುಪರೀಕ್ಷೆಗೆ ಒಳಪಡಿಸಬೇಕು ಹಾಗೂ ಪ್ರಕರಣ-ಕ್ಕೆ ಸಂಬಂಧಿಸಿದವರನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಸತ್ಯಾಂಶ ಹೊರತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಹೋರಾಟಗಾರರ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಪ್ರವೃತ್ತಿಯನ್ನು ಸರ್ಕಾರ ತಡೆಯಬೇಕು. ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ವರ್ಗಾವಣೆ ಮಾಡಿ ಜಿಲ್ಲೆಯ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೆ ಹತ್ಯೆಯಾದ ಬಾಲಕಿ-ಯ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ಧನ ನೀಡಬೇಕು ಹಾಗೂ ಕುಟುಂಬ ಸದಸ್ಯ-ರಿಗೆ ಪೊಲೀಸ್ ರಕ್ಷಣೆ ಒದಗಿಸಬೇಕು. ಸರ್ಕಾರ ವಿಳಂಬ ಧೋರಣೆ ಅನುಸರಿಸಿದಲ್ಲಿ ಕರ್ನಾಟಕ ಭೀಮ್ ಸೇನೆ ವತಿಯಿಂದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಹನುಮಂತಪ್ಪ ಸೀಕಲ್, ಮಲ್ಲೇಶಪ್ಪ, ಹನುಮಂತರಾಯ, ಕಾಶಿನಾಥ್ ಕುರ್ಡಿ, ತಾಯಣ್ಣ ಕಪಗಲ್, ಹುಸೇನಪ್ಪ, ಮೌನೇಶ ನಕ್ಕುಂದಿ, ಮರಿಬಸವ ಉಟಕನೂರು, ಹನುಮಂತ, ಲಕ್ಷ್ಮಣ ನಾಯಕ ಸೇರಿದಂತೆ ಇನ್ನಿತರರು ಇದ್ದರು.

# ಬೆಳೆಹಾನಿ ಪರಿಹಾರ: ಆಕ್ಷೇಪಣೆಗೆ ಅರ್ಜಿ ಆಹ್ವಾನ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಜಿಲ್ಲೆಯಲ್ಲಿ 2026-27ನೇ ಸಾಲಿನ ಏಪ್ರಿಲ್-2026 ಮಾಹೆಯ ದಿನಾಂಕ:19-04-2026ರಂದು ಸುರಿದ ಅಕಾಲಿಕ ಗಾಳಿ ಮಳೆಯಿಂದ ಜಿಲ್ಲೆಯ ಲಿಂಗಸೂಗೂರು, ಮಸ್ಕಿ ಹಾಗೂ ಸಿರವಾರ್ ತಾಲೂಕುಗಳಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗೆ ಉಂಟಾದ ಹಾನಿಗೆ ಜಿಲ್ಲಾಡಳಿತದಿಂದ ಪರಿಹಾರ ನೀಡಲಾಗುತ್ತಿದ್ದು, ರೈತರಿಂದ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಮೂಲಕ ಆಕ್ಷೇಪಣೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಎಸ್.ಪೂವಿತಾ ಅವರು ತಿಳಿಸಿದ್ದಾರೆ.**



ಸಿರವಾರ ತಾಲೂಕಿನಲ್ಲಿ 1.00 ಹೆಕ್ಟರ್ ತೋಟಗಾ-ರಿಕೆ ಕೃಷಿ, ಲಿಂಗಸುಗೂರು ತಾಲೂಕಿನಲ್ಲಿ 2.40 ಹೆಕ್ಟರ್ ತೋಟಗಾರಿಕೆ ಕೃಷಿ ಹಾಗೂ 15.60 ಹೆಕ್ಟರ್ ಇತರೆ ಕೃಷಿ, ಮಸ್ಕಿ ತಾಲೂಕಿನಲ್ಲಿ 1.60 ಹೆಕ್ಟರ್ ತೋಟಗಾರಿಕೆ ಕೃಷಿ ಪ್ರದೇಶದಲ್ಲಿ ಹಾನಿಯಾಗಿದ್ದು, ಒಟ್ಟು ಹೆಕ್ಟರ್ ಕ್ಷೇತ್ರಗಳಲ್ಲಿ ಜಂಟಿ ಸಮೀಕ್ಷೆಯ ಪರಿಶೀಲನಾ ವರದಿಯಂತೆ ಬೆಳೆ ಹಾನಿಯಾದ ರೈತರ ಪಟ್ಟಿಯನ್ನು ಜಿಲ್ಲಾಧಿಕಾ-ರಿಗಳ, ಉಪ ವಿಭಾಗಾಧಿಕಾರಿಗಳ, ತಹಶೀಲ್ದಾರರ, ಗ್ರಾಮ ಪಂಚಾಯತ, ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರಕಟಿಸಲಾಗಿದೆ.

ಈ ಕುರಿತು ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ತಮ್ಮ ಲಿಖಿತ ಆಕ್ಷೇಪಣೆಗಳನ್ನು ಸಂಬಂಧಿಸಿದ ತಹಶೀಲ್ದಾರ್/ಕೃಷಿ/ತೋಟಗಾರಿಕೆ ಇಲಾಖೆಗಳ ತಾಲ್ಲೂಕು ಕಚೇರಿಗಳಲ್ಲಿ ಅಥವಾ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ 07 ದಿನಗಳ ಒಳಗಾಗಿ ಸಲ್ಲಿಸಬಹುದಾಗಿದೆ. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗಿಲ್ಲ. ಎಂದಾದಲ್ಲಿ ಪಟ್ಟಿಯನ್ನು ಅಂತಿಮಗೊಳಿಸಿ ನಿಯಮಾನುಸಾರ ಪರಿಹಾರ ಪಾವತಿಸಲು ಕ್ರಮವಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳಾದ ಎಸ್.ಪೂವಿತಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# "ಬಹುಗ್ರಾಮ ಕುಡಿಯುವ ನೀರಿನ ಯೋಜನೆ ವಿಫಲ"

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ದೇವದುರ್ಗ ತಾಲ್ಲೂಕಿನ ಕರಡಿಗುಡ್ಡ, ಅಮರಪುರ, ಮುಂಡರಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 18 ಗ್ರಾಮಗಳಿಗೆ ಕೃಷ್ಣಾ ನದಿಯಿಂದ ಕುಡಿಯುವ ನೀರು ಪೂರೈಸುವ ಯೋಜನೆ ಸಂಪೂರ್ಣ ವಿಫಲವಾಗಿದೆ. ಎಲ್ಲ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ 2012-13ನೇ ಸಾಲಿನಲಿ ಜಲ ನಿರ್ಮಲ ಯೋಜನೆಯಡಿ ಬಹು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸುಮಾರು 12 ಕೋಟಿ ವೆಚ್ಚದಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಇಂದಿಗೂ ಯಾವ ಗ್ರಾಮಕ್ಕೂ ಹನಿ ನೀರು ಸರಬರಾಜು ಅಗಿಲ್ಲ.**

ಕೃಷ್ಣಾ ನದಿಯಿಂದ ಪೈಪ್‌ಲೈನ್ ಮಾಡಿ ಅಮರಪುರ ಗ್ರಾಮದ ಪಕ್ಕದಲ್ಲಿಯೇ ನೀರು ಶುದ್ದೀಕರಣ ಘಟಕ ಸ್ಥಾಪಿಸಲಾಗಿದೆ. ಅಲ್ಲಿಂದಲೇ ಎಲ್ಲ ಗ್ರಾಮಗಳಿಗೆ ನೀರು ಪೂರೈಕೆ ಮಾಡುವ ಯೋಜನೆ ಇದಾಗಿದೆ. ಮುಂಡರಗಿ, ಅಮರಪುರ ಗ್ರಾ.ಪಂ ವ್ಯಾಪ್ತಿಯ ಕೆಲವು



ಗ್ರಾಮಗಳಲ್ಲಿ 2007-08ರಲ್ಲಿ ಕುಡಿಯುವ ನೀರಿನಲ್ಲಿ ಆರ್ಸೆನಿಕ್, ಫ್ಲೋರೈಡ್ ಅಂಶ ಹೆಚ್ಚಾಗಿರುವ ವರದಿ ಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಮೂರು ಗ್ರಾ.ಪಂ ವ್ಯಾಪ್ತಿಯ ಹಳ್ಳಿಗಳಿಗೆ ಅಷ್ಟು ದೊಡ್ಡ ಪ್ರಮಾಣದ ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡಲಾಗಿತ್ತು. ಆದರೆ ನಿರ್ವಹಣೆ ಸಮಸ್ಯೆಯಿಂದ ಪಾಳು ಬಿದ್ದಿದೆ. ಅಲ್ಲದೇ ಈ ಯೋಜನೆಯಡಿ ಪ್ರತಿ ಗ್ರಾಮಕ್ಕೆ 50 ಸಾವಿರ ಲೀಟರ್ ನೀರು ಸಂಗ್ರಹದ ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದ್ದು ಅವೂ ಹಾಳಾಗಿ ಬೀಳುವ ಸ್ಥಿತಿಯಲ್ಲಿವೆ.

ಯೋಜನೆ ಪ್ರಾರಂಭಕ್ಕಾಗಿ ಕೆಲ ಸಂಘಟನೆಗಳು ಪ್ರತಿಭಟನೆ ಮಾಡಿದ್ದವು. ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಎಲ್ಲ ಗ್ರಾಮಗಳಲ್ಲಿ ತಲಾ 15 ಲಕ್ಷ ವೆಚ್ಚದಲ್ಲಿ ಆರ್‌ಓ ಪ್ಲಾಂಟ್‌ಗಳನ್ನು ನಿರ್ಮಿಸಿ ಹೋರಾಟಗಾರರ ಹಾಗೂ ಜನರ ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡಿದ್ದಾರೆ. ಸೊಲದಗುಡ್ಡ ಗ್ರಾಮದಲ್ಲಿ ಕಳೆದ ವರ್ಷ ನೀರಿನ ಸಮಸ್ಯೆ ಪರಿಹರಿಸಲು ಹೋರಾಟ ಮಾಡಿದ ಕಾರಣ ಎರಡು ಕೊಳವೆಬಾವಿಗಳನ್ನು ಕೊರೆಸಿ ನೀರು ಎತ್ತುವ ಯಂತ್ರಗಳನ್ನು ಅಳವಡಿಸಲಾಗಿತ್ತು. ಆದರೆ 15 ದಿನಗಳ ಹಿಂದೆ ಎರಡು ಯಂತ್ರಗಳು ಸುಟ್ಟುಹೋಗಿದ್ದು ನೀರಿನ ಸಮಸ್ಯೆ ಎದುರಾಗಿದೆ ಎಂದು ನಿವಾಸಿ ದೇವಪ್ಪ ಸೊಲದಗುಡ್ಡ ಹೇಳುತ್ತಾರೆ.

ಉಳಿದಂತೆ ಪ್ರತಿ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸೇರಿದ ಕೊಳವೆಬಾವಿಗಳಿದ್ದು ಕಿರು ನೀರು ಸರಬರಾಜು ಘಟಕಗಳ ಮೂಲಕ ಬಳಕೆಗಾಗಿ ನಲ್ಲಿಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಪಲಕನಮರಡಿ ಗ್ರಾ.ಪಂ ವ್ಯಾಪ್ತಿಯ 6 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ವ್ಯವಸ್ಥೆಗೆ ಸುಮಾರು 10 ಕೋಟಿ ವೆಚ್ಚದಲ್ಲಿ ಕೆರೆ ನಿರ್ಮಿಸಿ ನಿತ್ಯ ನೀರು ಸರಬರಾಜು ಮಾಡಲಾಗುತ್ತಿದೆ. ನೀರಿನ ಸಮಸ್ಯೆ ಇದೆ ಎಂದು ರೈತ ಸಂಘದ ಮುಖಂಡ ಹನುಮಂತಪ್ಪ ನಾಯಕ ತಿಳಿಸಿದ್ದಾರೆ. ಜಾಲಹಳ್ಳಿ ಹಾಗೂ ಲಿಂಗದಹಳ್ಳಿ ಗ್ರಾಮಗಳಿಗೆ 2007-08ರಲ್ಲಿ ರಾಜೀವ್ ಗಾಂಧಿ ಟೆಕ್ನಾಲಜಿ ಮಿಷನ್ ಯೋಜನೆಯಡಿ ಸುಮಾರು 4 ಕೋಟಿ ವೆಚ್ಚದಲ್ಲಿ ಕೃಷ್ಣಾ ನದಿಯಿಂದ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಯೋಜನೆ ಕೈಗೆತ್ತಿಕೊಂಡ ಕಾಮಗಾರಿ ಪೂರ್ಣಗೊಂಡು ವರ್ಷಗಳೇ ಕಳೆದರೂ ಜಾಲಹಳ್ಳಿ ಪಟ್ಟಣಕ್ಕೆ ಒಂದು ಹನಿ ನೀರು ಬಂದಿಲ್ಲ.

ಈ ಘಟಕ ನಿರ್ವಹಣೆ ಮಾಡಲು ಟೆಂಡರ್ ಮೂಲಕ ಗುತ್ತಿಗೆದಾರರಿಗೆ ಪ್ರತಿ ವರ್ಷಕ್ಕೆ 20 ಲಕ್ಷ ಪಾವತಿಸಲಾಗುತ್ತಿದೆ. ಕಳೆದ ಒಂದು ವರ್ಷದಿಂದ ಲಿಂಗದಹಳ್ಳಿ ಗ್ರಾಮಕ್ಕೆ ಮಾತ್ರ ನೀರು ಸರಬರಾಜು ಮಾಡಲಾಗಿದೆ. ಜಾಲಹಳ್ಳಿ ಪಟ್ಟಣದ 9 ವಾರ್ಡ್‌ಗಳಲ್ಲಿ 6 ಕಡೆ ತಲಾ 15 ಲಕ್ಷ ವೆಚ್ಚದಲ್ಲಿ ಆರ್‌ಓ ಘಟಕಗಳನ್ನು ಅಳವಡಿಸಲಾಗಿದ್ದು 3 ಘಟಕಗಳು ದುರಸ್ತಿಯಲ್ಲಿವೆ. ಚಿಂಚೋಡಿ ಗ್ರಾ.ಪಂ ವ್ಯಾಪ್ತಿಯ ವೀರಗೋಟ್, ಬುಂಕಲದೊಡ್ಡಿ ಗ್ರಾಮದಲ್ಲಿರುವ ಆರ್‌ಓ ಘಟಕ ಒಂದು ವರ್ಷದಿಂದ ಕೆಟ್ಟಿವೆ. ಬುಂಕಲದೊಡ್ಡಿ ಗ್ರಾಮದಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ಸುಮಾರು 2 ಕೋಟಿ ವೆಚ್ಚದಲ್ಲಿ ಪ್ರತಿ ಮನೆಗಳಿಗೆ ಪೈಪ್ ಲೈನ್ ಮಾಡಲಾಗಿದೆ. ಆದರೆ ಬಹುತೇಕ ಕಡೆ ಪೈಪ್ ಒಡೆದು ಹೋಗಿರುವ ಕಾರಣ ನೀರಿನ ಸಮಸ್ಯೆ ಅಗಿದೆ ಎಂದು ಗ್ರಾಮದ ನಿವಾಸಿ ಹನುಮಂತಪ್ಪ ಆರೋಪಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ICTSM

ICTSM (Information & Communication Technology System Maintenance) ಕೋರ್ಸ್ ವಿವರ ICTSM ಎಂದರೆ Information & Communication Technology System Maintenance. EzÀÄ ITI (Industrial Training Institute) ಯಲ್ಲಿ ಕಲಿಸುವ 2 ವರ್ಷದ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್, ನೆಟ್‌ವರ್ಕಿಂಗ್ ಹಾಗೂ ಐಟಿ ಸಿಸ್ಟಮ್ ಮೆಂಟೆನೆನ್ಸ್ ಸಂಬಂಧಿಸಿದ ತಾಂತ್ರಿಕ ಕೋರ್ಸ್ ಆಗಿದೆ. ಈ ಕೋರ್ಸ್ ವಿದ್ಯಾರ್ಥಿಗಳನ್ನು ಕಂಪ್ಯೂಟರ್ ತಾಂತ್ರಿಕ ತಜ್ಞರು (IT Technician) ಆಗಿ ರೂಪಿಸಲು ವಿನ್ಯಾಸಗೊಳಿಸಲಾಗಿದೆ. ಕೋರ್ಸ್ ಮಾಹಿತಿ ಕೋರ್ಸ್ ಅವಧಿ: 2 ವರ್ಷ ಸೆಮಿಸ್ಟರ್: 4 ಸೆಮಿಸ್ಟರ್ ಅರ್ಹತೆ: ಖಋಐಅ / 10ನೇ ತರಗತಿ ಪಾಸ್ ಕಲಿಯುವ ವಿಷಯಗಳು ಕಂಪ್ಯೂಟರ್ ಹಾರ್ಡ್‌ವೇರ್ ಅಸೆಂಬ್ಲಿ ಮತ್ತು ರಿಪೇರಿ ಆಪರೇಟಿಂಗ್ ಸಿಸ್ಟಮ್ ಸ್ಥಾಪನೆ ಸಾಫ್ಟ್‌ವೇರ್ ಸ್ಥಾಪನೆ ಮತ್ತು ನಿರ್ವಹಣೆ ನೆಟ್‌ವರ್ಕಿಂಗ್ ಮೂಲಗಳು ಮತ್ತು ಸಂರಚನೆ ಸಿಸ್ಟಮ್ ದೋಷನಿವಾರಣೆ ಐಟಿ ಸಿಸ್ಟಮ್ ನಿರ್ವಹಣೆ ಲಿನಕ್ಸ್ ಮತ್ತು ವಿಂಡೋಸ್ ಆಡಳಿತ. ಉದ್ಯೋಗ ಅವಕಾಶಗಳು (Job Opportunities) ICTSM ಕೋರ್ಸ್ ಪೂರ್ಣಗೊಳಿಸಿದ ನಂತರ ಕೆಳಗಿನ ಉದ್ಯೋಗಗಳಲ್ಲಿ ಅವಕಾಶಗಳಿವೆ: ಕಂಪ್ಯೂಟರ್ ಹಾರ್ಡ್‌ವೇರ್ ತಂತ್ರಜ್ಞ ಐಟಿ ಬೆಂಬಲ ಎಂಜಿನಿಯರ್ (IT Support Engineer) ನೆಟ್‌ವರ್ಕ್ ತಂತ್ರಜ್ಞ ಸಿಸ್ಟಮ್ ನಿರ್ವಹಣೆ ತಂತ್ರಜ್ಞ ಡೆಸ್ಕ್‌ಟಾಪ್ ಬೆಂಬಲ ಎಂಜಿನಿಯರ್ ಸೇವಾ ಕೇಂದ್ರ ತಂತ್ರಜ್ಞ ಡೇಟಾ ಸೆಂಟರ್ ಸಹಾಯಕ ಸಾರಾಂಶ: ICTSM ಕೋರ್ಸ್ ಐಟಿ ಕ್ಷೇತ್ರದಲ್ಲಿ ಬೇಗ ಉದ್ಯೋಗ ಪಡೆಯಲು ಸಹಾಯಕವಾಗಿದ್ದು, ಕಂಪ್ಯೂಟರ್ ಹಾಗೂ ನೆಟ್‌ವರ್ಕಿಂಗ್ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವನ್ನು ನಿರ್ಮಿಸಲು ನೆರವಾಗುತ್ತದೆ.

# ನೀಟ್ ಪರೀಕ್ಷೆ ಮರುನಡೆ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಸಿಂಧನೂರಿನಲ್ಲಿ ಎಸ್‌ಐಒ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಹಾಗೂ ನೀಟ್ ಮರುಪರೀಕ್ಷೆ (ರಿಪೀಟ್ ನೀಟ್) ನಡೆಸಿರುವುದನ್ನು ಖಂಡಿಸಿ, ಹಗರಣದ ಬಗ್ಗೆ ಪಾರದರ್ಶಕ ಹಾಗೂ ಕಾಲಮಿತಿಯೊಳಗಿನ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಎಸ್‌ಐಒ ವತಿಯಿಂದ ನಗರದಲ್ಲಿ ಸಿ ಎಂ ಸಿ ಕಚೇರಿಯಿಂದ ತಹಶೀಲ್ದಾರ್ ಕಚೇರಿವರೆಗೆ ಕೇಂದ್ರ ಸರ್ಕಾರದ ವಿರುದ್ಧ ಹಾಗೂ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಲಾಯಿತು.**

ಬಳಿಕ ತಹಸೀಲ್ದಾರ್ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ದೇಶದಾದ್ಯಂತ 22 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆದಿದ್ದು, ಪರೀಕ್ಷೆಗೆ ಮುಂಚಿತವೇ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವ ಆರೋಪಗಳು ಹಾಗೂ ಮರುಪರೀಕ್ಷೆ ನಡೆಸಿರುವುದು ವಿದ್ಯಾರ್ಥಿಗಳಲ್ಲಿ ಆತಂಕ ಮತ್ತು ಗೊಂದಲ ಸೃಷ್ಟಿಸಿದೆ. ಇದು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಮತ್ತು ಕೇಂದ್ರ ಸರ್ಕಾರದ ಆಡಳಿತಾತ್ಮಕ ವೈಫಲ್ಯಕ್ಕೆ ಸ್ಪಷ್ಟ ಉದಾಹರಣೆಯಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಜಮಾಅತೆ ಇಸ್ಲಾಮಿ ಹಿಂದ್ ನಗರ ಘಟಕದ ಅಧ್ಯಕ್ಷ ಟಿ. ಹುಸೇನ್ ಸಾಬ್ ಮಾತನಾಡಿ, "ನೀಟ್ ಮರುಪರೀಕ್ಷೆಯ ನಿರ್ಧಾರದಿಂದ ಲಕ್ಷಾಂತರ ವಿದ್ಯಾರ್ಥಿಗಳು ಮತ್ತಷ್ಟು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾರೆ.

ವರ್ಷಪೂರ್ತಿ ಶ್ರಮಪಟ್ಟು ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕು. ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಜೊತೆಗೆ ವಿದ್ಯಾರ್ಥಿಗಳ ಭವಿಷ್ಯವನ್ನು ಸುರಕ್ಷಿತಗೊಳಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ," ಎಂದು ಹೇಳಿದರು ಹಾಗೂ ಬಡ




ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆ ಹಲವು ವರ್ಷಗಳ ಶ್ರಮ, ತ್ಯಾಗ ಮತ್ತು ಭವಿಷ್ಯದ ಕನಸಾಗಿದೆ. ಆದರೆ ಪ್ರಶ್ನೆಪತ್ರಿಕೆ ಸೋರಿಕೆ, ಅಸಮರ್ಪಕ ಪರೀಕ್ಷಾ ನಿರ್ವಹಣೆ ಹಾಗೂ ಮರುಪರೀಕ್ಷೆಗಳಂತಹ ಬೆಳವಣಿಗೆಗಳು ವಿದ್ಯಾರ್ಥಿಗಳ ಮಾನಸಿಕ ಸ್ಥೈರ್ಯಕ್ಕೆ ಧಕ್ಕೆಯುಂಟು ಮಾಡುತ್ತಿವೆ.ಪರೀಕ್ಷಾ ವ್ಯವಸ್ಥೆಯ ಮೇಲಿನ ನಂಬಿಕೆ ಕುಸಿಯುವಂತೆ ಮಾಡಿರುವ ಈ ಘಟನೆಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಅನಿಶ್ಚಿತತೆಗೆ ತಳ್ಳಿವೆ ಎಂದು ಎಸ್‌ಐಒ ಮುಖಂಡ ಜಿಶಾನ್ ಆರೋಪಿಸಿದರು. ಹಾಗೂ ಎಸ್.ಐ.ಒ ರಾಯಚೂರು ಜಿಲ್ಲಾಧ್ಯಕ್ಷ ಇಮ್ತಿಯಾಜ್ ಮಾತನಾಡಿ, "ವಿದ್ಯಾರ್ಥಿಗಳು 365 ದಿನ ಹಗಲು–ರಾತ್ರಿ ಎನ್ನದೇ ಕಷ್ಟಪಟ್ಟು ಓದಿರುತ್ತಾರೆ.

ಯಾರೋ ಒಬ್ಬರು ಮಾಡಿದ ತಪ್ಪಿಗೆ ದೇಶಾದ್ಯಂತ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತೆ ಪರೀಕ್ಷೆ ಬರೆಯಲು ಒತ್ತಾಯಿಸುವುದು ನ್ಯಾಯಸಮ್ಮತವಲ್ಲ. ಇದರಿಂದ ವಿದ್ಯಾರ್ಥಿಗಳು ಮಾನಸಿಕ ಒತ್ತಡ ಹಾಗೂ ಅಸ್ವಸ್ಥತೆಗೆ ಒಳಗಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಕುರಿತು ಕೇಂದ್ರ ಸರ್ಕಾರ ತಕ್ಷಣ ಮಧ್ಯಸ್ಥಿಕೆ ವಹಿಸಿ ವಿದ್ಯಾರ್ಥಿಗಳ ಹಿತವನ್ನು ಕಾಪಾಡಬೇಕು. ಪ್ರಶ್ನೆಪತ್ರಿಕೆ ಲೀಕ್ ಮಾಡಿದ ಯಾವುದೇ ವ್ಯಕ್ತಿಯಾಗಲಿ ಅಥವಾ ಜಾಲವಾಗಲಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ತಕ್ಕ ಶಿಕ್ಷೆ ನೀಡಬೇಕು," ಎಂದು ಆಗ್ರಹಿಸಿದರು.ಇದೇ ವೇಳೆ ನೀಟ್ ಪರೀಕ್ಷೆ ಬರೆದ ಜಿ.ಐ.ಒ ಘಟಕದ ಇಬ್ಬರು ವಿದ್ಯಾರ್ಥಿನಿಯರು ತಮ್ಮ ಮನಸ್ಥಿತಿಯನ್ನು ಹಂಚಿಕೊಂಡು ಮಾತನಾಡಿದರು.

"ನಾವು ವರ್ಷಪೂರ್ತಿ ಕಷ್ಟಪಟ್ಟು ಓದಿ ಪರೀಕ್ಷೆ ಬರೆದಿದ್ದೇವೆ. ಇದೀಗ ಮರುಪರೀಕ್ಷೆ ಎಂಬ ವಿಚಾರ ಕೇಳಿ ತುಂಬಾ ಆತಂಕ ಮತ್ತು ಭಯ ಉಂಟಾಗಿದೆ. ವಿದ್ಯಾರ್ಥಿಗಳ ಪರಿಶ್ರಮಕ್ಕೆ ನ್ಯಾಯ ದೊರಕಬೇಕು. ಸರ್ಕಾರ ನಮ್ಮ ಭವಿಷ್ಯದ ಬಗ್ಗೆ ಗಂಭೀರವಾಗಿ ಯೋಚಿಸಬೇಕು," ಎಂದು ಅವರು ತಮ್ಮ ನೋವನ್ನು ವ್ಯಕ್ತಪಡಿಸಿದರು. ಕೇಂದ್ರೀಕೃತ ಪರೀಕ್ಷೆಗಳನ್ನು ಸುರಕ್ಷಿತವಾಗಿ ಮತ್ತು ನ್ಯಾಯಸಮ್ಮತವಾಗಿ ನಡೆಸುವಲ್ಲಿ ಎನ್‌ಟಿಎ ಪದೇ ಪದೇ ವಿಫಲವಾಗುತ್ತಿರುವುದು ಪ್ರಸ್ತುತ ಪರೀಕ್ಷಾ ವ್ಯವಸ್ಥೆಯ ದೋಷಗಳನ್ನು ತೋರಿಸುತ್ತದೆ. ಆದ್ದರಿಂದ ಪರೀಕ್ಷಾ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ತರಬೇಕು ಹಾಗೂ ಪರೀಕ್ಷಾ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕ ಮತ್ತು ಹೊಣೆಗಾರಿಕೆಯುತವಾಗಿಸಬೇಕು ಎಂದು ವಿದ್ಯಾರ್ಥಿ ಮುಖಂಡರು ಒತ್ತಾಯಿಸಿದರು. ಕೇಂದ್ರ ಶಿಕ್ಷಣ ಸಚಿವರು ಈ ವೈಫಲ್ಯದ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು.

ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾಗಿರುವ ಎಲ್ಲಾ ವ್ಯಕ್ತಿಗಳು ಮತ್ತು ಜಾಲಗಳ ವಿರುದ್ಧ ಪಾರದರ್ಶಕ ಹಾಗೂ ಕಾಲಮಿತಿಯ ತನಿಖೆ ನಡೆಸಿ ಕಠಿಣ ಶಿಕ್ಷೆ ವಿಧಿಸಬೇಕು. ಜೊತೆಗೆ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ





ಕೇಂದ್ರ ಸರ್ಕಾರ ದೃಢ ಕ್ರಮ ಕೈಗೊಳ್ಳಬೇಕು ಎಂಬ ಹಕ್ಕೊತ್ತಾಯದ ಮನವಿಪತ್ರವನ್ನು ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಜಮಾಅತೆ ಇಸ್ಲಾಂ ಹಿಂದ್ ತಾಲ್ಲೂಕು ಘಟಕದ ಅಧ್ಯಕ್ಷ ಟಿ ಹುಸೇಬ್‌ಸಾಬ್, ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ಅಬುಲೈಸ್,ಇರ್ಷಾದ್.ಕೆ,ಮುಖಂಡ ಜಾಂದ್‌ಪಾಷಾ ಜಾಗೀರದಾರ,ಸಾಮಾಜಿಕ ಹೋರಾಟಗಾರ ಜಿಶಾನ್ ಮಾನ್ವಿ, ಎಸ್‌ಐಒ ಜಿಲ್ಲಾ ಘಟಕದ ಅಧ್ಯಕ್ಷ ಇಮ್ತಿಯಾಜ್, ಎಸ್. ಐ. ಒ ತಾಲ್ಲೂಕು ಘಟಕದ ಅಧ್ಯಕ್ಷ ಅಫ್ಜಲ್ ಹುಸೇನ್, ಸದಸ್ಯ , ಸೇರಿದಂತೆ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್, ಎಸ್‌ಐಒ, ಜಿಐಒ ಘಟಕದ ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## 14 ಲಕ್ಷ ರೂ,ವೆಚ್ಚದ ಬಲಕುಂದಿನಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಶಾಸಕ ಬಿ ಎಂ ನಾಗರಾಜ ಚಾಲನೆ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ತಾಲೂಕಿನ ಬಲಕುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನೀಲಕಂಠ ಕ್ಯಾಂಪ್ ನಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆಯ 13.98 ಲಕ್ಷ ರೂ, ವೆಚ್ಚದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅನುದಾನದ ಅಡಿಯಲ್ಲಿ ನಿರ್ಮಿಸಲಾಗಿಸುತ್ತಿರುವ ನೂತನ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಬಿ ಎಂ ನಾಗರಾಜ ಅಡಿಗಲ್ಲು ನೆರವೇರಿಸಿದರು.**



ಸಿ ಡಿ ಪಿ ಓ ಪ್ರದೀಪ್, ಮುಖಂಡರಾದ ಬಿ.ಎಂ. ರುದ್ರಮನಿ ಸ್ವಾಮಿ, ನರಸಿಂಹ ನಾಯಕ್, ಶ್ಯಾಮ್ ಸುಂದರ್, ಸುರೇಶ್ ರೆಡ್ಡಿ, ಬಿ.ವೆಂಕಟೇಶ್, ಹೆಚ್. ಗಣೇಶ್, ಪರಮೇಶ್, ನಸುರುದ್ದೀನ್, ಸಾಕ್ಷರತಾ ಅಬ್ದುಲ್ ನಬಿ, ಪವನ್ ದೇಸಾಯಿ, ಬಿ.ಎಂ. ಮಣಿಕಂಠ ನಾಯಕ್, ಜಿಲ್ಲಾ ಪಂಚಾಯತ್ ರಾಜ್ ಇಂಜಿನಿಯರ್ ಶ್ರೀನಿವಾಸ್ ಅಂಗನವಾಡಿ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

# ಮೇ.21, 22ರಂದು ಐಟಿಐ ಕ್ಯಾಂಪಸ್ ಸೆಲೆಕ್ಷನ್




ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರಿನ ಮಾಣಿಕ ನಗರದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2026–27ನೇ ಸಾಲಿನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಬೆಂಗಳೂರು ಇವರ ವತಿಯಿಂದ ಶಿಶಿಕ್ಷಂ ತರಬೇತಿಗಾಗಿ ಕ್ಯಾಂಪಸ್ ಸೆಲೆಕ್ಷನ್ ಕಾರ್ಯಕ್ರಮವನ್ನು ಮೇ.21 ಹಾಗೂ 22ರ ಬೆಳಿಗ್ಗೆ 10ಗಂಟೆಗೆ ಆಯೋಜನೆ ಮಾಡಲಾಗಿದೆ.**

ಈ ಶಿಶಿಕ್ಷಂ ಕ್ಯಾಂಪಸ್ ಸೆಲೆಕ್ಷನ್ ಕಾರ್ಯಕ್ರಮದಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಬೆಂಗಳೂರು ಉದ್ದಿಮೆಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದು, ಶಿಶಿಕ್ಷಂ ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳುತ್ತಿರುವುದರಿಂದ ಐಟಿಐ ಯಾವುದೇ ವೃತ್ತಿಯ ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಈಗಾಗಲೇ ಐಟಿಐ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದಾಗಿದ್ದು, ಆಸಕ್ತ ಅಭ್ಯರ್ಥಿಗಳು ಈ ಕ್ಯಾಂಪಸ್‌ನಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿಮೊಬೈಲ್ ಸಂಖ್ಯೆ: 9035198134, 9538003397, 8904784507ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ದರ್ಜೆ–1ರ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಗ್ನಿ ಅವಘಡ ಪೀಡಿತ ಕುಟುಂಬಕ್ಕೆ ಶ್ರೀದೇವಿ ಆರ್ ನಾಯಕ ಭೇಟಿ ಧನ ಸಹಾಯ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಶ್ರೀ ಶಿವರಾಜ ಹರಿಜನ ಅವರ ಮನೆಯಲ್ಲಿ ಸಂಭವಿಸಿದ ವಿದ್ಯುತ್ ಅವಘಡದ ಸುದ್ದಿ ತಿಳಿದ ತಕ್ಷಣ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀಮತಿ ಶ್ರೀದೇವಿ ಆರ್ ನಾಯಕ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.**

ಅವಘಡದಿಂದ ಸಂಕಷ್ಟಕ್ಕೆ ಒಳಗಾದ ಕುಟುಂಬಕ್ಕೆ ಆಹಾರ ಧಾನ್ಯಗಳನ್ನು ವಿತರಿಸುವ



ಮೂಲಕ ಧನ ಸಹಾಯ ಮಾಡಿದರು. ಜೊತೆಗೆ ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಕೂಡಲೇ ಮನೆ ನಿರ್ಮಾಣ ಮಾಡಿ ಕೊಡುವಂತೆ ಸೂಚನೆ ನೀಡಿದರು. ಹಾಗೆಯೇ ಕುಟುಂಬದ ಮುಖ್ಯಸ್ಥರಿಗೆ ಅಗತ್ಯವಿರುವ ವಿವಿಧ ಮೂಲ ಸೌಕರ್ಯಗಳನ್ನು ತಕ್ಷಣ ಒದಗಿಸುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಶಿವರಾಜ್ ನಾಯಕ ಬೊಮ್ಮನಹಳ್ಳಿ, ಶ್ರೀ ಹನುಮಂತ್ರಾಯ ನಾಯಕ, ಶ್ರೀ ಚಂದ್ರು ಬೊಮ್ಮನಹಳ್ಳಿ, ಶ್ರೀ ಸಾಬಣ್ಣ ಹೂಗಾರ್, ಶ್ರೀ ತಿಮ್ಮಣ್ಣ ಹೊಸೂರು, ಶ್ರೀ ಭೀಮಣ್ಣ ವೀರಗೋಟ, ಶ್ರೀ ಚನ್ನಬಸವ ನಾಯಕ, ಶ್ರೀ ತಿಮ್ಮಣ್ಣ ಮುರಾಳ್, ಶ್ರೀ ಲಿಂಗಣ್ಣ ನಾಯಕ ಹವಾಲ್ದಾರ್, ಶ್ರೀ ರಾಮನಗೌಡ ಕೋಟೆ, ಭರತ್ ಕುಮಾರ್ ನಾಯಕ ಗಲಗ, ಶ್ರೀ ಹಬ್ರಾಮ್ ಕಮಲದಿನ್ನಿ, ಶ್ರೀ ರಮೇಶ ಬಾಗೂರು, ಶ್ರೀ ಅಭಿಷೇಕ್ ಪೂಜಾರಿ, ಶ್ರೀ ಶಿವರಾಜ್ ಮುದಕಿ, ಶ್ರೀ ಬಾಲಪ್ಪ ನಾಯಕ, ಶ್ರೀ ಉದಯ ಮನಗಾರ್, ಶರಣಬಸವ ಮ್ಯಾಕಲದೊಡ್ಡಿ, ಶ್ರೀ ಮೌನೇಶ ಕಕ್ಕಲದೊಡ್ಡಿ, ಪಕ್ರುದ್ದಿನ್ ವಂದಲಿ, ಮನೋಜ್ ಗಣದಾಳ ಸೇರಿದಂತೆ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು ಹಾಗೂ ಯುವ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ವರದಿ ಖಾಜಾಹುಸನ ಬಾಬಾ ಜಾಲಹಳ್ಳಿ

# "ಅಭಿವೃದ್ಧಿ ವಂಚಿತ ಎ ಗ್ರೇಡ್ ದೇವಸ್ಥಾನ"

ನೈಜ್ಯ ದೆಸೆ ನ್ಯೂಸ್


**ಲಿಂಗಸುಗೂರು: ಜಿಲ್ಲೆಯಲ್ಲಿ ದೊಡ್ಡ ದೇವಸ್ಥಾನಗಳಲ್ಲಿ ಒಂದಾದ ಲಿಂಗಸಗೂರು ತಾಲೂಕಿನ ಗುರುಗುಂಟಾ ಅಮರೇಶ್ವರ ದೇವಸ್ಥಾನ ಅಭಿವೃದ್ಧಿಯಿಂದ ವಂಚಿತವಾಗಿದೆ. ಪ್ರಕೃತಿ ಮಡಿಲಲ್ಲಿರುವ ಅಮರೇಶ್ವರ ಸುಕ್ಷೇತ್ರ ಪೌರಾಣಿಕ ಹಿನ್ನಲೆ ಹೊಂದಿದೆ. ದೇವಾಲಯದ ಒಳಗಿರುವ ಶಿವಲಿಂಗವನ್ನು ಸುತ್ತುವರೆದಿರುವ ನೀರಿನ ಹರಿವು ಒಂದು ವಿಶಿಷ್ಟ ಲಕ್ಷಣವಾಗಿದೆ. ಈ ನೀರಿನ ಮೂಲ ಇನ್ನೂ ರಹಸ್ಯವಾಗಿದೆ.**

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ 'ಎ' ಗ್ರೇಡ್ ಸ್ಥಾನದಲ್ಲಿರುವ ಜಿಲ್ಲೆಯ ಮೂರು ದೇವಸ್ಥಾನಗಳ ಪೈಕಿ ತಾಲ್ಲೂಕಿನ ಅಮರೇಶ್ವರ ದೇವಸ್ಥಾನವೂ ಒಂದು. ವಾರ್ಷಿಕ ಒಂದೂವರೆ ಕೋಟಿ ರೂಪಾಯಿಗೂ ಅಧಿಕ ಆದಾಯ ಇರುವ ಈ ದೇವಸ್ಥಾನ ಅಭಿವೃದ್ಧಿಯಿಂದ ಸಂಪೂರ್ಣ ವಂಚಿತವಾಗಿದೆ. ಲಿಂಗಸುಗೂರು ಪಟ್ಟಣದಿಂದ 18ಕಿ.ಮೀ ದೂರವಿರುವ ಅಮರೇಶ್ವರ ಸುಕ್ಷೇತ್ರಕ್ಕೆ ಸಮರ್ಪಕ ಬಸ್ ಸೌಕರ್ಯ ಇಲ್ಲದಾಗಿದೆ. ಇತ್ತೀಚಿಗೆ ಲಿಂಗಸುಗೂರು, ಸಿಂಧನೂರು, ಮಸ್ಕಿ ಸೇರಿದಂತೆ ಘಟಕಗಳ ಕಲುಬುರಗಿ ಮಾರ್ಗದ ಬಸ್‌ಗಳನ್ನು ಅಮರೇಶ್ವರ ಕ್ರಾಸ್‌ನಲ್ಲಿ ನಿಲುಗಡೆ ಮಾಡುವಂತೆ ಕಲ್ಯಾಣ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ಆದೇಶ ಮಾಡಿದ್ದರು.

ಆದರೆ ಆದೇಶ ಕಾರ್ಯರೂಪಕ್ಕೆ ಬಂದಿಲ್ಲ. ಲಿಂಗಸುಗೂರು ಘಟಕದಿಂದ ಪ್ರತಿ ದಿನ ಕೇವಲ ಆರು ಬಾರಿ ಬಸ್ ಸಂಚಾರ ಮಾಡುತ್ತಿದೆ. ಅಮಾವಾಸ್ಯೆ ದಿನ ಒಂದು ಬಸ್ ಓಡಿಸಲಾಗುತ್ತಿದೆ. ಪ್ರತಿದಿನವೂ ಭಕ್ತರ ಅನುಕೂಲಕ್ಕಾಗಿ ಕಲಬುರಗಿ ಮಾರ್ಗದ ಎಲ್ಲ ಬಸ್‌ಗಳು ಅಮರೇಶ್ವರ ಕ್ರಾಸ್ ಬದಲು ಸುಕ್ಷೇತ್ರಕ್ಕೆ ಬಂದು ಬಂದು ಹೋಗುವ ವ್ಯವಸ್ಥೆ ಆಗಬೇಕು ಎನ್ನುವುದು ಭಕ್ತರ ಆಗ್ರಹವಾಗಿದೆ. ವಸತಿ ಸೌಕರ್ಯದ್ದೇ ದೊಡ್ಡ ಸವಾಲು: ದೇವಸ್ಥಾನದಲ್ಲಿ ಭಕ್ತರೇ ಕಟ್ಟಿಸಿದ 90 ಕೊಠಡಿಗಳು ಹಾಗೂ ಸರ್ಕಾರ ನಿರ್ಮಾಣ ಮಾಡಿದ 5 ಕೊಠಡಿಗಳುಳ್ಳ ಯಾತ್ರಿ ನಿವಾಸ, ಪಿಡಬ್ಲ್ಯೂಡಿ ಇಲಾಖೆಯ ಪ್ರವಾಸಿ ಮಂದಿರ ಇದೆ. ಭಕ್ತರು ಕಟ್ಟಿಸಿದ 90 ಕೊಠಡಿಗಳಲ್ಲಿ ಕೆಲ ಕೊಠಡಿಗಳು ಹಳೆಯದಾಗಿದ್ದು ಶೇ80 ರಷ್ಟು ಕೊಠಡಿಗಳು ನಿರ್ವಹಣೆ ಇಲ್ಲದೆ ಹಾಳಾಗಿವೆ.

ಬಾಗಿಲು, ಕಿಟಕಿ, ವಿದ್ಯುತ್ ಸಂಪರ್ಕ ಇಲ್ಲದ ಕೊಠಡಿಗಳು ಹೆಚ್ಚಿವೆ. ಯಾತ್ರಿ ನಿವಾಸದಲ್ಲಿ ಕಿಟಕಿ, ಫ್ಯಾನ್, ಸಮರ್ಪಕ ವಿದ್ಯುತ್ ಕೊರತೆ ಇರುವುದರಿಂದ ಭಕ್ತರು ಇಲ್ಲಿ ತಂಗಲು ಹಿಂದೇಟು ಹಾಕುತ್ತಿದ್ದಾರೆ. ಸುಕ್ಷೇತ್ರದಲ್ಲಿರುವ ಶೌಚಾಲಯಗಳ ಸ್ಥಿತಿಯನ್ನು ಕೇಳುವವರೇ ಇಲ್ಲದಾಗಿದೆ. ಬಯಲು ಪ್ರದೇಶವೇ ಶೌಚಾಲಯವಾಗಿದೆ. ಪ್ರತಿ ವರ್ಷ ಹೋಳಿ ಹುಣ್ಣಿಮೆ ದಿನ ಜಾತ್ರಾ ಮಹೋತ್ಸವ ನಡೆಯುತ್ತದೆ. ಆ ಸಂದರ್ಭದಲ್ಲಿ ವಿಶೇಷವಾಗಿ ನಡೆಯುವ ಜಾನುವಾರು ಜಾತ್ರೆಗೆ ಆಗಮಿಸುವ ರೈತರಿಗಾಗಿ ಅನೇಕ ವರ್ಷಗಳ ಹಿಂದೆ ನಿರ್ಮಿಸಿದ ರೈತ ಭವನದ ಒಂದು ಭಾಗದ ಗೋಡೆ ಕುಸಿದು ಬಿದ್ದು ರೈತ ಭವನ ಪಾಳುಬಿದ್ದಿದೆ.





ರಾಜ್ಯದ ವಿವಿಧ ಜಿಲ್ಲೆಗಳು, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಿಂದ ಬರುವ ಭಕ್ತರಿಗೆ ಸುಸಜ್ಜಿತ ಹಾಗೂ ಅತ್ಯಾಧುನಿಕ ಸೌಲಭ್ಯಗಳ ವಸತಿ ಸಮುಚ್ಛಯ ಇಲ್ಲದಿರುವುದರಿಂದ ಲಿಂಗಸುಗೂರಿನಲ್ಲಿ ರೂಮ್ ಮಾಡಿ ನಂತರ ದೇವಸ್ಥಾನಕ್ಕೆ ಬಂದು ದರ್ಶನ ಪಡೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಏಳು ವರ್ಷಗಳ ಹಿಂದೆ ನಾಲ್ಕು ವಾಣಿಜ್ಯ ಮಳಿಗೆಗಳು ನಿರ್ಮಾಣ ಮಾಡಿದರೂ ಅವುಗಳ ಬಳಕೆಯಿಲ್ಲದೆ ಪಾಳು ಬಿದ್ದು ಹಾಳಾಗುತ್ತಿವೆ. ದೇವಸ್ಥಾನದಲ್ಲಿ ಏನೇ ಸೌಕರ್ಯ ಬಂದಿದ್ದರೂ ಅದು ಭಕ್ತರ ನೆರವಿನಿಂದ ಹೊರತು ಧಾರ್ಮಿಕ ದತ್ತಿ ಇಲಾಖೆಯಿಂದ ಅಂತಹ ಗುರುತರ ಯೋಜನೆಗಳು ದೇವಸ್ಥಾನಕ್ಕೆ ಬಂದಿಲ್ಲ, ದೇಣಿಗೆ ನೀಡಲು ಸಾಕಷ್ಟು ಜನ ಭಕ್ತರು ಮುಂದೆ ಬಂದರೂ ಅದನ್ನು ಸ್ವೀಕರಿಸಿ ಅಭಿವೃದ್ಧಿ ಮಾಡುವ ಮನಸ್ಸೇ ಇಲ್ಲಿನ ಅಧಿಕಾರಿಗಳಿಗೆ ಇಲ್ಲದಂತಾಗಿದೆ ಎಂದು ಭಕ್ತ ಅಮರೇಶಸ್ವಾಮಿ ಹೇಳುತ್ತಾರೆ.

ಪ್ರತಿವರ್ಷ ಹೋಳಿ ಹುಣ್ಣಿಮೆ ದಿನ ನಡೆಯುವ ಅಮರೇಶ್ವರ ಜಾತ್ರೋತ್ಸವದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುತ್ತಾರೆ. ಅಮರೇಶ್ವರ ಕ್ರಾಸ್‌ನಿಂದ ದೇವಸ್ಥಾನವರೆಗೆ ಕಿರಿದಾದ ರಸ್ತೆಯಿದ್ದು ವಾಹನಗಳ ಸಂಚಾರ ದಟ್ಟಣೆ ಉಂಟಾಗಿ ಉಸಿರುಗಟ್ಟುವ ವಾತವಾರಣ ನಿರ್ಮಾಣವಾಗಿ ಭಕ್ತರು ಪರದಾಡುವಂತಹ ಪರಿಸ್ಥಿತಿ ಪ್ರತಿ ವರ್ಷ ಅನುಭವಿಸುವಂತಾಗುತ್ತಿದೆ. ರಥೋತ್ಸವಕ್ಕೆ ಮುಂಚೆ ದರ್ಶನ ಪಡೆದುಕೊಂಡು ಹೋಗುವವರ ಸಂಖ್ಯೆಯೇ ಹೆಚ್ಚಾಗಿದೆ. ರಥೋತ್ಸವದ ದಿನದಂದು ವಾಹನಗಳ ಹಾಗೂ ಭಕ್ತರ ಸುಗಮ ಸಂಚಾರಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಮಾಡಬೇಕಾಗಿದೆ.

ಖಾಸಗಿ ವ್ಯಕ್ತಿಗಳದ್ದೇ ಕಾರುಬಾರು: ದೇವಸ್ಥಾನಕ್ಕೆ ಬರುವ ಭಕ್ತರಿಗೆ ವಸತಿ ಸೌಕರ್ಯ, ಕಲ್ಯಾಣಮಂಟಪ ಇತರೆ ಸೇವೆಗಳನ್ನು ಒದಗಿಸುವ ವಿಚಾರದಲ್ಲಿ ಧಾರ್ಮಿಕ ದತ್ತಿ ಇಲಾಖೆ ಸಿಬ್ಬಂದಿಗಿಂತ ಖಾಸಗಿ ವ್ಯಕ್ತಿಗಳ ಕಾರುಬಾರು ಅಧಿಕವಾಗಿದೆ. ವಸತಿ ಕೊಠಡಿಗಳ ಬೀಗಗಳು ಖಾಸಗಿ ವ್ಯಕ್ತಿಗಳ ಕೈಯಲ್ಲಿ ಇರುತ್ತವೆ, ಅವರ ಹಿಡಿತದಿಂದ ದೇವಸ್ಥಾನ ಮುಕ್ತವಾಗಿ ಭಕ್ತರಿಗೆ ಸೇವೆಗಳು ಸಿಗುವಂತಾಗಬೇಕು ಎಂಬುದು ಭಕ್ತರ ಅಭಿಪ್ರಾಯವಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.